ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	108
ಸದಸ್ಯರ ಹೆಸರು	:	ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	11.08.2025
ಉತ್ತರಿಸುವ ಸಚಿವರು	:	ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಶಾಲೆಗಳಲ್ಲಿ ವಿತರಿಸುವ ಮೊಟ್ಟೆ ಮತ್ತು ಬಾಳೆಹಣ್ಣು ಇತ್ಯಾದಿಗಳ ಪ್ರಮಾಣವೆಷ್ಟು; ಇವುಗಳನ್ನು ಸರಕಾರವೇ ವಿತರಿಸುತ್ತಿದೆಯೇ; ಅಥವಾ ಇದಕ್ಕೆ ಅನುದಾನ ನೀಡಲಾಗುತ್ತಿದೆಯೇ; ಅನುದಾನವನ್ನು ಯಾವ ಆಧಾರದಲ್ಲಿ ಯಾವಾಗ ನಿಗದಿಪಡಸಲಾಗಿದೆ ಮತ್ತು ಪರಿಷ್ಕರಿಸಿದೆ;	1. ಪ್ರತಿ ದಿನ ಪ್ರತಿ ಮಗುವಿಗೆ 50 ಗ್ರಾಂನ ಒಂದು ಮೊಟ್ಟೆ ಅಥವಾ 02 ಬಾಳೆಹಣ್ಣುಗಳನ್ನು ಪ್ರಮಾಣಿತ ಕಾರ್ಯಾಚರಣೆಯ ವಿಧಾನಗಳ ಪ್ರಕಾರ ವಿತರಿಸಲಾಗುತ್ತಿದೆ. 2. ವಾರದಲ್ಲಿ 02 ದಿನಗಳು ರಾಜ್ಯ ಸರ್ಕಾರದ ಅನುದಾನದಿಂದ ಮತ್ತು ಉಳಿದ 04 ದಿನಗಳು ಅಜೀಂ ಪ್ರೇಮ್‌ಜಿ ಫೌಂಡೇಷನ್, ಬೆಂಗಳೂರು ಈ ಸಂಸ್ಥೆಯ ಅನುದಾನದಿಂದ ಒಟ್ಟು ವಾರದ 06 ದಿನಗಳು ಮೊಟ್ಟೆ/ಬಾಳೆಹಣ್ಣನ್ನು ಮಕ್ಕಳಿಗೆ ವಿತರಿಸಲಾಗುತ್ತಿದೆ. 3. 2021-22ನೇ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆಗೆ ರೂ.6/-ಗಳ ಒಂದು ದಿನದ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದ್ದು ಈ ಮೊತ್ತವನ್ನು ಪರಿಷ್ಕರಿಸಿರುವುದಿಲ್ಲ.
ಆ)	ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ವಿತರಿಸುವ ಪೌಷ್ಟಿಕ ಆಹಾರ ಕುರಿತ ನಿಯಮಗಳೇನು; ಶಾಲಾ ಮಕ್ಕಳಿಗೆ ನೀಡಬೇಕಾದ ಆಹಾರ ಪದಾರ್ಥಗಳ ಸಂಗ್ರಹ ವಿತರಣೆ ಮತ್ತು ಅದಕ್ಕೆ ಸರಕಾರ ಮತ್ತು ಇತರ ಸಂಸ್ಥೆಗಳು ವ್ಯಯಿಸುವ ಮೊತ್ತವೆಷ್ಟು;	ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆಗೆ ಸಂಬಂಧಿಸಿದಂತೆ ಅನುಸರಿಸಬೇಕಾಗಿರುವ ಕ್ರಮಗಳ ಕುರಿತು ಇಲಾಖೆಯ ವತಿಯಿಂದ ಮಾರ್ಗಸೂಚಿಯನ್ನು ಹೊರಡಿಸಲಾಗಿದ್ದು ಸದರಿ ಮಾರ್ಗಸೂಚಿಯನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1-8ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ವಿತರಿಸಲು ಅಗತ್ಯವಿರುವ ಎಲ್ಲಾ ವೆಚ್ಚಗಳನ್ನು ಭರಿಸಲು (ಆಹಾರ ಪದಾರ್ಥಗಳ ಸಂಗ್ರಹಣೆ ಮತ್ತು ವಿತರಣೆ ವೆಚ್ಚಗಳನ್ನು ಒಳಗೊಂಡಂತೆ) 2025-26ನೇ ಸಾಲಿನ ಆಯವ್ಯಯದಲ್ಲಿ ಒಟ್ಟಾರೆಯಾಗಿ ರೂ. 570.41 ಕೋಟಿಗಳ ಕೇಂದ್ರದ ಪಾಲಿನ ಹಾಗೂ ರೂ.336.96 ಕೋಟಿಗಳ ರಾಜ್ಯದ ಪಾಲಿನ ಅನುದಾನವನ್ನು ವಾರ್ಷಿಕವಾಗಿ ನಿಗದಿಪಡಿಸಲಾಗಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 9-10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ವಿತರಿಸಲು, 1-10ನೇ ತರಗತಿ

		ವಿದ್ಯಾರ್ಥಿಗಳಿಗೆ ಕ್ಷೀರಭಾಗ್ಯ ಯೋಜನೆಯಡಿ ಬಿಸಿಹಾಲನ್ನು ನೀಡಲು, ವಾರದಲ್ಲಿ 02 ದಿನಗಳ ಅವಧಿಗೆ ಪೂರಕ ಪೌಷ್ಠಿಕ ಆಹಾರ ನೀಡಲು, ಕರ್ನಾಟಕ ಪಬ್ಲಿಕ್ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಬೆಳಗಿನ ಉಪಹಾರ, ಮಧ್ಯಾಹ್ನ ಬಿಸಿಯೂಟ, ಪೂರಕ ಪೌಷ್ಠಿಕ ಆಹಾರ ಮತ್ತು ಬಿಸಿಹಾಲನ್ನು ನೀಡಲು ಅಗತ್ಯವಿರುವ ಎಲ್ಲಾ ವೆಚ್ಚಗಳನ್ನು ಭರಿಸಲು (ಆಹಾರ ಪದಾರ್ಥಗಳ ಸಂಗ್ರಹಣೆ ಮತ್ತು ವಿತರಣೆ ವೆಚ್ಚಗಳನ್ನು ಒಳಗೊಂಡಂತೆ) 2025-26ನೇ ಸಾಲಿನ ಆಯವ್ಯಯದಲ್ಲಿ ಕ್ಷೀರಭಾಗ್ಯ ಯೋಜನೆಯಡಿ ಒಟ್ಟಾರೆಯಾಗಿ ರೂ. 1626.99 ಕೋಟಿಗಳ ವಾರ್ಷಿಕ ಅನುದಾನ ನಿಗದಿಪಡಿಸಲಾಗಿದೆ. ದಿನಾಂಕ: 16-09-2024 ರಿಂದ 15-09-2027 ರವರೆಗೆ ಅಂದರೆ 03 ವರ್ಷಗಳ ಅವಧಿಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1-10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರದಲ್ಲಿ 04 ದಿನ ಪೂರಕ ಪೌಷ್ಠಾಕ ಆಹಾರವನ್ನು ವಿತರಿಸುವ ವೆಚ್ಚವನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್, ಬೆಂಗಳೂರು ಈ ಸಂಸ್ಥೆಯವತಿಯಿಂದ ಭರಿಸಲು ರೂ.1591.60 ಕೋಟಿಗಳ ಮೊತ್ತಕ್ಕೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.
ಇ)	ಸರಕಾರ ವಿತರಿಸುವ ಆಹಾರ ಸಾಮಗ್ರಿ ಮತ್ತು ಸ್ಥಳೀಯವಾಗಿ ಖರೀದಿಸಬೇಕಾದ ಸಾಮಗ್ರಿಗಳಿಗೆ ಸರಕಾರ ನಿಗದಿಪಡಿಸಿದ ಮತ್ತು ನೀಡುವ ಮೊತ್ತದ ನೈಜವಾಗಿ ಸಮರ್ಪಕವಾಗಿದೆಯೇ; ಈ ಮೊತ್ತವನ್ನು ಯಾವಾಗ ನಿಗದಿ ಪಡಿಸಲಾಗಿತ್ತು ಮತ್ತು ಪರಿಷ್ಕರಿಸಿದೆ; ಈ ಕುರಿತು ಸರಕಾರಕ್ಕೆ ದರ ಪರಿಷ್ಕರಿಸುವಂತೆ ಮನವಿ ಸಲ್ಲಿಸಲಾಗಿದೆಯೇ; ಸಲ್ಲಿಸಲಾಗಿದ್ದರೆ ಈ ಕುರಿತು ಸರಕಾರದ ಕ್ರಮವೇನು;	ಮಧ್ಯಾಹ್ನ ಉಪಹಾರ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಕೇಂದ್ರ ಸರ್ಕಾರದಿಂದ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಅಗತ್ಯವಿರುವ ಆಹಾರ ಸಮಗ್ರಿಗಳನ್ನು ಖರೀದಿಸಲು ಪ್ರತಿ ವಿದ್ಯಾರ್ಥಿಗಳಿಗೆ ಒಂದು ದಿನಕ್ಕೆ ಅನ್ವಯವಾಗುವಂತೆ ಪರಿವರ್ತನಾ ವೆಚ್ಚವನ್ನು ನಿಗದಿಪಡಿಸಲಾಗುತ್ತದೆ. ಈ ಪರಿವರ್ತನಾ ವೆಚ್ಚವನ್ನು ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಪರಿಷ್ಕರಿಸುವುದರಿಂದ ಕೇಂದ್ರ ಸರ್ಕಾರದಿಂದ ನಿಗದಿಪಡಿಸಲಾಗುವ ಪರಿವರ್ತನಾ ವೆಚ್ಚದ ಮೊತ್ತವು ಸಮರ್ಪಕವಾಗಿದೆ. 2024-25ನೇ ಸಾಲಿನಲ್ಲಿ ದಿನಾಂಕ: 1-12-2024 ರಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರದಿಂದ ಪರಿವರ್ತನಾ ವೆಚ್ಚದ ದರಗಳನ್ನು ಪರಿಷ್ಕರಿಸಲಾಗಿದೆ. ಪ್ರಸ್ತುತ 2025-26ನೇ ಸಾಲಿನಲ್ಲಿಯೂ ದಿನಾಂಕ: 01-05-2025 ರಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರದಿಂದ ಪರಿವರ್ತನಾ ವೆಚ್ಚದ ದರಗಳನ್ನು ಪರಿಷ್ಕರಿಸಲಾಗಿದೆ.
ಈ)	ಪ್ರಸ್ತುತ ಮೊಟ್ಟೆ ಮತ್ತು ಬಾಳೆಹಣ್ಣು ಅಥವಾ ಇತರ ಯಾವುದೇ ವಸ್ತುಗಳ ಮಾರುಕಟ್ಟೆ ದರ ಹೆಚ್ಚಾಗಿ ಶಾಲಾಭಿವೃದ್ಧಿ ಮೇಲುಸ್ತುವಾರಿ	ಬಂದಿರುವುದಿಲ್ಲ.

	ಸಮಿತಿ ಅಥವಾ ಶಾಲಾ ಶಿಕ್ಷಕರು ತಮ್ಮ ಸ್ವಂತ ಹಣವನ್ನು ಖರ್ಚು ಮಾಡುತ್ತಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರಕಾರ ಅನುದಾನ ಮೊತ್ತವನ್ನು ಹೆಚ್ಚಿಸಲು ಯಾವಾಗ ಕ್ರಮವಹಿಸುವುದು?	ಇಲಾಖೆಯಿಂದ ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ನಿಗದಿಪಡಿಸಲಾಗಿರುವ ಘಟಕ ವೆಚ್ಚ ರೂ.6/-ರ ಮಿತಿಯಲ್ಲಿ ಮೊಟ್ಟೆ/ಬಾಳೆಹಣ್ಣನ್ನು ಶಾಲಾ ಹಂತದಲ್ಲಿ ಖರೀದಿಸಿ ವಿತರಿಸಲಾಗುತ್ತಿದೆ. ಸದರಿ ದರವನ್ನು ಪರಿಷ್ಕರಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಬಾಕಿ ಇರುವುದಿಲ್ಲ.

ಇಪಿ 93 ಎಂಎಂಎಸ್ 2025

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಎಸ್‌ಎ೦೯-1

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560 001

ಸಂಖ್ಯೆ: ಎಂ1/ಪಿಎಂಪೋಷಣ್/APF-Fund/SNF/E-1509746/2024-25. ದಿ:12.09.2024

ಸುತ್ತೋಲೆ

ವಿಷಯ: 2024-25ನೇ ಸಾಲಿನಲ್ಲಿ ರಾಜ್ಯ ಸರಕಾರವು ಮಧ್ಯಾಹ್ನ ಉಪಹಾರ ಯೋಜನೆಯಡಿ ಅಜಿಂ ಪ್ರೇಮ್‌ಜಿ ಫೌಂಡೇಶನ್, ಬೆಂಗಳೂರು ಇವರ ಅನುದಾನದ ಸಹಭಾಗಿತ್ವದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ಈಗಾಗಲೇ ವಾರದಲ್ಲಿ ಎರಡು ದಿನ ನೀಡಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ಹೊರತಾಗಿ) ವಾರದ ಎಲ್ಲಾ ಆರು ದಿನಗಳಲ್ಲಿ ಪೂರಕ ಪೌಷ್ಠಿಕ ಆಹಾರವನ್ನು ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಸಂಬಂಧ ಮಾರ್ಗಸೂಚಿ ನೀಡಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಪಿ 30 ಎಂ.ಎಂ. ಎಸ್.2023 , ಬೆಂಗಳೂರು , ದಿನಾಂಕ, 09.08.2023 ,
2. ಆಯುಕ್ತರ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: ಎಂ1/ಮಉಯೋ /ಪೂ.ಪೌ.ಆ/E-FILE-1098910/2023-24 ದಿನಾಂಕ,11.08.2023
3. ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲೆಪ್‌ಮೆಂಟ್ ಇವರೊಂದಿಗೆ ಶಾಲಾ ಶಿಕ್ಷಣ ಇಲಾಖೆ ಮಾಡಿಕೊಂಡಿರುವ ಒಡಂಬಡಿಕೆ- Memorandum of Understanding (MoU) , ದಿನಾಂಕ 20.07.2024
4. ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲೆಪ್‌ಮೆಂಟ್ ಇವರೊಂದಿಗೆ ಶಾಲಾ ಶಿಕ್ಷಣ ಇಲಾಖೆ ಮಾಡಿಕೊಂಡಿರುವ Grant Agreement, ದಿನಾಂಕ 27.08.2024.
5. ಸರ್ಕಾರಿ ಆದೇಶ ಸಂಖ್ಯೆ: ಇಪಿ 78 ಎಂ.ಎಂ.ಎಸ್. 2024, ಬೆಂಗಳೂರು ದಿನಾಂಕ 06.09.2024.
6. ಆಯುಕ್ತರ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ : ಎಂ-1/ಪಿಎಂ ಪೋಷಣ್ /APF Funds/E-1509746/2024-25, ದಿನಾಂಕ 06.09.2024.
7. ದಿನಾಂಕ:12.09.2024 ರಂದು ಏರ್ಪಡಿಸಿದ್ದ You Tube Live Streaming ತರಬೇತಿ ಕಾರ್ಯಕ್ರಮ.

*****

1. ಪೀಠಿಕೆ:

ರಾಜ್ಯ ಸರ್ಕಾರದ ಶೇಕಡಾ 100ರ ಆರ್ಥಿಕ ಅನುದಾನದ ನೆರವಿನಿಂದ ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ

ವಿದ್ಯಾರ್ಥಿಗಳಿಗೆ ಅಪೌಷ್ಟಿಕತೆ ಮತ್ತು ರಕ್ತ ಹೀನತೆ ನಿವಾರಿಸಲು ಮಧ್ಯಾಹ್ನದ ಬಿಸಿಯೂಟದೊಂದಿಗೆ ವಾರಕ್ಕೆ 2 ದಿನಗಳಂದು ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ, ಮೊಟ್ಟೆಯನ್ನು ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ವಿತರಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಉಲ್ಲೇಖ-1 ಮತ್ತು 2 ರ ಆದೇಶಗಳಂತೆ ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.

ಇದಕ್ಕೆ ಬೆಂಬಲವಾಗಿ ಹಾಗೂ ಪೂರಕವಾಗಿ, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸದರಿ ಕಾರ್ಯಕ್ರಮವನ್ನು ಮತ್ತಷ್ಟು ಬಲವರ್ಧನೆಗೊಳಿಸಲು ರಾಜ್ಯದ ಪ್ರತಿಷ್ಠಿತ ಖಾಸಗಿ ಸಂಸ್ಥೆಗಳ ವಲಯದಿಂದ ಅಜೀಂ ಪ್ರೇಮಜಿ ಫೌಂಡೇಶನ್ ಫಾರ್ ಡೆವೆಲಪ್‌ಮೆಂಟ್ (APF) ಸಂಸ್ಥೆ, ಇವರು ತಮ್ಮ ಅನುದಾನದ ನೆರವಿನೊಂದಿಗೆ ಸಹಭಾಗಿತ್ವ ನೀಡಲು ಮುಂದೆ ಬಂದಿರುತ್ತಾರೆ.

2024-25ನೇ ಸಾಲಿನಿಂದ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪ್ರಸ್ತುತ 02 ದಿನಗಳಿಗೆ ನೀಡುತ್ತಿರುವ ಪೂರಕ ಪೌಷ್ಟಿಕ ಆಹಾರದ ಜೊತೆಗೆ ವಾರಕ್ಕೆ ಪ್ರತಿ ವಿದ್ಯಾರ್ಥಿಗೆ ಒಟ್ಟು 06 ದಿನಗಳ ಅವಧಿಗೆ ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆಯನ್ನು, ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಇತರೆ ಪೂರಕ ಪೌಷ್ಟಿಕ ಆಹಾರವಾಗಿ ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ಹೆಚ್ಚುವರಿಯಾಗಿ ವಿತರಿಸುವ ಕುರಿತಂತೆ ಅಜೀಂ ಪ್ರೇಮಜಿ ಫೌಂಡೇಶನ್ ಫಾರ್ ಡೆವೆಲಪ್‌ಮೆಂಟ್ (APF) ಸಂಸ್ಥೆಯು ಶಾಲಾ ಶಿಕ್ಷಣ ಇಲಾಖೆಯೊಂದಿಗೆ ಉಲ್ಲೇಖ-3 ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರ ಸಮ್ಮುಖದಲ್ಲಿ ದಿನಾಂಕ 20.07.2024 ರಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಉಲ್ಲೇಖ–4 ರಲ್ಲಿ ರಾಜ್ಯದ ಅಂದಾಜು 55,64,394 ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್-2024 ರ ಮಾಹೆಯಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಆಗುವ ಒಟ್ಟು ಅಂದಾಜು ವೆಚ್ಚ ರೂ.1591,60,14,000/- ಆರ್ಥಿಕ ಅನುದಾನವನ್ನು ಭರಿಸಲು ಒಪ್ಪಿಗೆ ಸೂಚಿಸಿ Grant Agreement ನ್ನು ದಿನಾಂಕ 27.08.2024 ರಂದು ಅನುಷ್ಠಾನಕ್ಕಾಗಿ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

2. **ಕಾರ್ಯಕ್ರಮದ ಉದ್ದೇಶಗಳು:**
   - ಕರ್ನಾಟಕ ಸರ್ಕಾರದೊಂದಿಗೆ ಕೈಜೋಡಿಸಿ ಶಾಲಾ ವಿದ್ಯಾರ್ಥಿಗಳ ನಿರಂತರ ಕಲಿಕೆಯನ್ನು ಮತ್ತು ಬೌದ್ಧಿಕ ವಿಕಾಸವನ್ನು ಪ್ರೋತ್ಸಾಹಿಸುವುದು.
   - ಶಾಲೆಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳ ದೈನಂದಿನ ತರಗತಿ ಹಾಜರಾತಿಯನ್ನು ವೃದ್ಧಿಸುವುದು.
   - ವಿದ್ಯಾರ್ಥಿಗಳ ಸಮಗ್ರ ದೈಹಿಕ ಆರೋಗ್ಯ ಮತ್ತು ಬೆಳವಣಿಗೆಯನ್ನು ಉತ್ತಮಗೊಳಿಸಿ ಅಭಿವೃದ್ಧಿಪಡಿಸುವುದು.
   - ವಿದ್ಯಾರ್ಥಿಗಳಲ್ಲಿರುವ ಅಪೌಷ್ಟಿಕತೆ ಮತ್ತು ರಕ್ತ ಹೀನತೆಯನ್ನು ನಿವಾರಿಸುವುದು.
   - ರಾಜ್ಯ ಸರ್ಕಾರ ನೀಡುತ್ತಿರುವ ವಾರಕ್ಕೆ 2 ದಿನಗಳ ಪೂರಕ ಪೌಷ್ಟಿಕ ಆಹಾರವನ್ನು ವಾರದ ಎಲ್ಲಾ ದಿನಗಳಿಗೂ ವಿಸ್ತರಿಸಿ, ವಾರದಲ್ಲಿ ಹೆಚ್ಚುವರಿಯಾಗಿ 4 ದಿನಗಳಂದು ನೀಡಿ ವಿದ್ಯಾರ್ಥಿಗಳ ಪೌಷ್ಟಿಕತೆಯನ್ನು ಬೆಂಬಲಿಸುವುದು.
   - ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಮೊಟ್ಟೆಗೆ ಪರ್ಯಾಯವಾಗಿ ಸಮನಾದ ಬಹು ಪೋಷಕಾಂಶಗಳುಳ್ಳ ಇತರೆ ಪೂರಕ ಪೌಷ್ಟಿಕ ಆಹಾರವನ್ನು (Eggs / Other Healthy Nutritional Supplements) ಒದಗಿಸುವುದು.

3. ಕಾರ್ಯಕ್ರಮದ ಸ್ವರೂಪ:

3.1 ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವೆಲಪ್‌ಮೆಂಟ್ (APF) ಸಂಸ್ಥೆಯು ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 1-10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಶಾಲೆಗಳಲ್ಲಿ ಆರಂಭಿಸಿರುವ ಪೂರ್ವಪ್ರಾಥಮಿಕ ಶಾಲೆಗಳ (LKG & UKG) ವಿದ್ಯಾರ್ಥಿಗಳಿಗೂ ಸಹ ಪ್ರಸ್ತುತ ವರ್ಷದಿಂದಲೇ ಆರಂಭಿಸಿ ವಾರದ ಎಲ್ಲಾ 4 ದಿನಗಳು ಸೇರಿದಂತೆ ಒಟ್ಟು ವಾರದ 6 ದಿನಗಳಂದು ಪೂರಕ ಪೌಷ್ಟಿಕ ಆಹಾರವನ್ನು (ಸರ್ಕಾರದಿಂದ ವಿತರಿಸುತ್ತಿರುವ 2 ದಿನಗಳ ಹೊರತಾಗಿ) ವಿತರಿಸುವ ಕ್ರಮ ವಹಿಸುವುದು. ಇದರಿಂದಾಗಿ ಪ್ರತಿ ವಿದ್ಯಾರ್ಥಿಗೆ ವಾರದಲ್ಲಿ ಎಲ್ಲಾ ಒಟ್ಟು 06 ಶಾಲಾ ಕರ್ತವ್ಯದ ದಿನಗಳಂದು ವಿತರಣೆ ಮಾಡುವುದು.

3.2 APF ಸಂಸ್ಥೆಯು ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನದ ಪೂರಕ ಪೌಷ್ಟಿಕ ಆಹಾರದ ವಿತರಣೆಗೆ ಭರಿಸಬೇಕಾಗಿರುವ ಘಟಕ ವೆಚ್ಚವಾಗಿ ರೂ.6/-ರ ದರದಲ್ಲಿ ಮೊಟ್ಟೆ (Eggs), ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು (Other Healthy Nutritional Supplements) ಖರೀದಿಸಿ ಶಾಲಾ ವಿದ್ಯಾರ್ಥಿಗಳ ದೈನಂದಿನ ಹಾಜರಾತಿಯಂತೆ ವಿತರಿಸಲು ಅಗತ್ಯ ಆರ್ಥಿಕ ನೆರವು ನೀಡಲು ಉಲ್ಲೇಖ-3 ಮತ್ತು ಉಲ್ಲೇಖ-4ರಲ್ಲಾಗಿರುವ ಒಡಂಬಡಿಕೆಯಂತೆ ಕ್ರಮವಹಿಸುವುದು.

3.3 ಸದರಿ ರೂ.6/- ರ ಘಟಕ ವೆಚ್ಚವು ಮುಂದಿನ ದಿನಗಳಲ್ಲಿ ಸರ್ಕಾರದ ನಿರ್ಧಾರದಂತೆ ಪರಿಷ್ಕರಣೆಯಾದಲ್ಲಿ, ಪರಿಷ್ಕರಿಸಿದ ದರದಂತೆ ಆರ್ಥಿಕ ನೆರವನ್ನು ಒದಗಿಸಲು APF ಸಂಸ್ಥೆಯು ಒಪ್ಪಿ ಒಡಂಬಡಿಕೆ ಮಾಡಿಕೊಂಡಿರುತ್ತದೆ.

3.4 ಉಲ್ಲೇಖ-1 ರಲ್ಲಿ ಹಿಂದಿನ ವರ್ಷಗಳಲ್ಲಿ ನಿರ್ವಹಿಸಿದಂತೆ ಪೂರಕ ಪೌಷ್ಟಿಕ ಆಹಾರವನ್ನು ಶಾಲಾ ಹಂತದಲ್ಲಿಯೇ ಖರೀದಿಸುವುದು ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಸುರಕ್ಷಿತವಾಗಿ ಉತ್ತಮ ಗುಣಮಟ್ಟದಲ್ಲಿ ನಿಗದಿತ ಪ್ರಮಾಣದಲ್ಲಿ ವಿತರಿಸಲು ಸೂಕ್ತ ವ್ಯವಸ್ಥೆ ಮಾಡುವುದು. ರಾಜ್ಯ ಸರ್ಕಾರದಿಂದ 02 ದಿನಗಳಿಗೆ ವಿತರಿಸಲು ಅನುದಾನ ಶಾಲೆಗಳಿಗೆ ಹಿಂದಿನ ವರ್ಷಗಳಂತೆ ಬಿಡುಗಡೆಯಾದರೆ, ವಾರದ ಉಳಿದ 04 ದಿನಗಳಿಗೆ ವಿತರಿಸಲು ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವೆಲಪ್‌ಮೆಂಟ್ ಸಂಸ್ಥೆಯಿಂದ ಅನುದಾನ ಪ್ರತ್ಯೇಕವಾಗಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ತೆರೆಯಲಾಗಿರುವ ಪ್ರತ್ಯೇಕವಾದ ಕೆನರಾ ಬ್ಯಾಂಕ್ ಖಾತೆಗಳ ವ್ಯವಸ್ಥೆಯ ಮೂಲಕ ರಾಜ್ಯ, ಜಿಲ್ಲೆ, ತಾಲ್ಲೂಕು ಹಂತದಿಂದ ಶಾಲೆಗಳ ಪ್ರಸ್ತುತ MDM ಜಂಟಿ ಬ್ಯಾಂಕ್ ಖಾತೆಗಳಿಗೆ ಬೇಡಿಕೆಗೆ ಅನುಗುಣವಾಗಿ ದಿನಾಂಕ 16 ಸೆಪ್ಟೆಂಬರ್ 2024 ರಿಂದ ಅನುಷ್ಠಾನಾಧಿಕಾರಿಗಳು ಬಿಡುಗಡೆ ಮಾಡುವ ಕ್ರಮವಹಿಸುವುದು.

3.5 ರಾಜ್ಯ ಸರ್ಕಾರವು APF ಸಂಸ್ಥೆಯ ಸಹಭಾಗಿತ್ವದಲ್ಲಿ ಹೆಚ್ಚುವರಿಯಾಗಿ ವಾರದಲ್ಲಿ ನಾಲ್ಕು ದಿನ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸುವ ಮೂಲಕ ಕರ್ನಾಟಕದ 55 ಲಕ್ಷ ಮಕ್ಕಳಿಗೆ ವಾರದ ಎಲ್ಲಾ 6 ದಿನಗಳಲ್ಲೂ ಮೊಟ್ಟೆ /ಬಾಳೆಹಣ್ಣು /ಶೇಂಗಾ ಚಿಕ್ಕಿ ವಿತರಿಸುವುದು.

3.6 ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ (ಪೂರಕ ಪೌಷ್ಟಿಕ ಆಹಾರ ಖರೀದಿ, ಸಾಗಾಣಿಕೆ, ದಾಸ್ತಾನು, ಇಂದನ ವೆಚ್ಚ, ಮೊಟ್ಟೆ ಸಿಪ್ಪೆ ಸುಲಿಯುವಿಕೆ ಮತ್ತು ವಿತರಣೆಗಾಗಿ) ದಿನಾಂಕ 16.09.2024ರಿಂದ ದಿನಾಂಕ 15.09.2027ರವರಗೆ ಒಟ್ಟು ಮೂರು ವರ್ಷಗಳ ಅವಧಿಗೆ APF ಸಂಸ್ಥೆಯು ಅಗತ್ಯ ಅನುದಾನವಾಗಿ ರೂ.1591,60,14,000/- ಗಳನ್ನು ಒಟ್ಟು ಮೊತ್ತವಾಗಿ ಶಾಲಾ ಶಿಕ್ಷಣ ಇಲಾಖೆಗೆ ನೀಡುವುದು.

3.7 ಸದರಿ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರವೇ ವಿನಿಯೋಗಿಸಬೇಕೇ ಹೊರತು ಬೇರೆ ಯಾವುದೇ ಇತರ ಉದ್ದೇಶಗಳಿಗೆ ಉಪಯೋಗಿಸುವಂತಿಲ್ಲ.

3.8 ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ, ಪೂರಕ ಪೌಷ್ಟಿಕ ಆಹಾರದ ದೈನಂದಿನ ಬಳಕೆ/ಖರೀದಿ ಪ್ರಕ್ರಿಯೆ/ಮಾಸಿಕ ಬಳಕೆಯ ಪ್ರಮಾಣ (Utilisation Certificate) ಪತ್ರಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು ನಿರ್ವಹಿಸಬೇಕಾಗುತ್ತದೆ. ಬ್ಲಾಕ್/ಜಿಲ್ಲಾ ಮಟ್ಟದ ಮೇಲ್ವಿಚಾರಕ ಅಧಿಕಾರಿಗಳು ಈ ಮಾಹಿತಿಯನ್ನು ವಾರಕ್ಕೊಮ್ಮೆ/ಮಾಸಿಕ ಆಧಾರದ ಮೇಲೆ ನಿಗದಿತ ನಮೂನೆಗಳಲ್ಲಿ (spreadsheet) ಕ್ರೋಢೀಕರಿಸಬೇಕು ಮತ್ತು ಅದನ್ನು ರಾಜ್ಯ ಕಚೇರಿಯ ಹಿರಿಯ ಮೇಲ್ವಿಚಾರಕ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಬೇಕು. ವಾರದಲ್ಲಿ ಆರು ದಿನ ಎಲ್ಲಾ ಮಕ್ಕಳಿಗೆ ಮೊಟ್ಟೆ/ಬಾಳೆಹಣ್ಣು/ಶೇಂಗಾ ಚಿಕ್ಕಿಯ ಖರೀದಿ, ಬಳಕೆ ಮತ್ತು ವಿತರಣೆಯು ಸಮರ್ಪಕವಾಗಿ ನಡೆಸುತ್ತಿರುವ ಬಗ್ಗೆ ಪರಿಶೀಲಿಸಲು, ಖಚಿತಪಡಿಸಿಕೊಳ್ಳಲು ಸೂಕ್ತ ತಪಾಸಣೆಯನ್ನು ಕೈಗೊಳ್ಳುವುದು. ಅನುದಾನದ ಸೋರಿಕೆ, ಅಪವ್ಯಯವಾಗದಂತೆ ಎಚ್ಚರವಹಿಸುವುದು.

3.9 ಶಾಲಾ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಂಸ್ಥೆಯವರು ಒಟ್ಟಾಗಿ ರಾಜ್ಯ ಮಟ್ಟದಲ್ಲಿ ಚಾಲನಾ ಮತ್ತು ಪರಾಮರ್ಶ ಸಮಿತಿಯನ್ನು ಸರ್ಕಾರ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಅಧ್ಯಕ್ಷತೆಯಲ್ಲಿ ರಚಿಸಿಕೊಂಡು ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯ ಬಗ್ಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪ್ರಗತಿ ಪರಿಶೀಲಿಸಿ ಮೇಲ್ವಿಚಾರಣೆ ನಡೆಸಲಾಗುತ್ತದೆ. ಇದೇ ಮಾದರಿಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಂಸ್ಥೆಯ ಪ್ರತಿನಿಧಿಗಳನ್ನೊಳಗೊಂಡಂತೆ ಉಪಸಮಿತಿಯನ್ನು ರಚಿಸಿಕೊಂಡು , ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಆಗಿಂದಾಗ್ಗೆ ರಾಜ್ಯಮಟ್ಟದಲ್ಲಿ ಪ್ರಗತಿ ಪರಿಶೀಲನೆ ಕೈಗೊಂಡು ಮಾರ್ಗದರ್ಶಿಸಲಾಗುವುದು. ಜಿಲ್ಲಾ ಹಂತದಲ್ಲಿ ಒಂದು ಜಿಲ್ಲಾ ಪ್ರಗತಿ ಪರಿಶೀಲನಾ ಸಮಿತಿಯನ್ನು ರಚಿಸಿಕೊಂಡು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪ್ರತಿ ತ್ರೈಮಾಸಿಕ ಒಂದು ಬಾರಿ ಸಭೆ ಸೇರಿ ಪ್ರಗತಿ ಪರಿಶೀಲಿಸಿ ಮಾಹಿತಿ ಪಡೆದು ಸೂಕ್ತ ನಿರ್ದೇಶನವನ್ನು ನೀಡಲಾಗುವುದು. ಇದೇ ಮಾದರಿಯಲ್ಲಿ ತಾಲ್ಲೂಕು ಹಂತದಲ್ಲಿ ಶಾಲಾವಾರು ಕಾರ್ಯಕ್ರಮ ಚಟುವಟಿಕೆಗಳನ್ನು ಹಾಗೂ ಅನುದಾನದ ಬಳಕೆಯನ್ನು ಗಮನಿಸಲು ಪ್ರಗತಿ ಪರಿಶೀಲನಾ ಸಮಿತಿಯನ್ನು ತಾಲ್ಲೂಕು ಪಂಚಾಯತ್ ಹಂತದಲ್ಲಿ ರಚಿಸಿಕೊಳ್ಳಲು ಸೂಚಿಸಿದೆ.

3.10 APF ಸಂಸ್ಥೆಯು ಆಡಿಟ್ ಸಮಿತಿಯನ್ನು (Audit Committee) ರಚಿಸಿ ಪ್ರತಿ ಶಾಲೆಗಳ ಅನುದಾನ ಬಳಕೆಯ ಬಗ್ಗೆ, ಪೂರಕ ಪೌಷ್ಟಿಕ ಆಹಾರದ ಖರೀದಿ, ದಾಸ್ತಾನು, ಗುಣಮಟ್ಟ ಮತ್ತು ವಿತರಣೆಯ ಬಗ್ಗೆ ನಿರ್ವಹಿಸಿರುವ ದಾಖಲೆಗಳನ್ನು ಪರಿಶೀಲಿಸಿ ತಪಾಸಣೆ ನಡೆಸಿ ಖಾತರಿ ಪಡಿಸಿಕೊಳ್ಳುತ್ತದೆ. ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆಯು ಅನುಮತಿ ನೀಡಿದ್ದು, ಸದರಿ ಆಡಿಟ್ ಸಮಿತಿಗೆ ಶಾಲಾ ಹಂತದಲ್ಲಿ, ತಾಲ್ಲೂಕು ಹಂತದಲ್ಲಿ ಮತ್ತು ಜಿಲ್ಲಾ ಹಂತದಲ್ಲಿ ಸೂಕ್ತ ದಾಖಲೆಗಳನ್ನು ಅಂದರೆ ಪೂರಕ ದಾಖಲೆಗಳಾದ ಖರೀದಿ ಬಿಲ್ಲುಗಳು, ವೋಚರ್‌ಗಳು, ಖರ್ಚು-ವೆಚ್ಚಗಳ ದಾಖಲೆವಹಿಯನ್ನು, ಹಣಕಾಸಿನ ಜಮಾ-ಖರ್ಚುಗಳ ದಾಖಲೆಗಳನ್ನು, ಫಲಾನುಭವಿ ವಿದ್ಯಾರ್ಥಿಗಳ ಹಾಜರಾತಿ ದಾಖಲೆಗಳನ್ನು ಮತ್ತು ಪೂರಕ ಪೌಷ್ಟಿಕ ಆಹಾರದ ಸ್ವೀಕರಿಸಿದ ದಾಖಲೆಗಳು ಮುಂತಾದ ಅಗತ್ಯ ದಾಖಲೆಗಳನ್ನು ಒದಗಿಸಲು ಸೂಚಿಸಿದೆ.

3.11 APF ಸಂಸ್ಥೆಯು ಸದರಿ ಕಾರ್ಯಕ್ರಮದ ಕುರಿತು ತನ್ನದೇ ಆದ ಸಂಶೋಧನಾ ಕಾರ್ಯ ನಿರ್ವಹಿಸುವ ತಂಡಗಳಿಂದ ಸಂಶೋಧನೆ ಮತ್ತು ಇತರೆ ಅಧ್ಯಯನವನ್ನು ಕಾಲಕಾಲಕ್ಕೆ ನಡೆಸಲಿದೆ. ಇದಕ್ಕೆ ಶಾಲಾ ಶಿಕ್ಷಣ ಇಲಾಖೆಯಿಂದ ಅನುಮತಿ ನೀಡಲಾಗಿದೆ.

4. **ಅಜೀಂ ಪ್ರೇಮ್‌ಜಿ ಫೌಂಡೇಶನ್ (APF) ರವರಿಂದ ಆರ್ಥಿಕ ನೆರವು ಮತ್ತು ಅನುದಾನ ಬಿಡುಗಡೆ:**

4.1 APF ಸಂಸ್ಥೆಯು ಪ್ರತಿ ತ್ರೈಮಾಸಿಕ ಅನುದಾನವನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಕೆನರಾ ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ತೆರೆದು ಆರಂಭಿಸಿದ ಬ್ಯಾಂಕ್ ಖಾತೆಗಳ (ZBSA-ಶೂನ್ಯ ಖಾತೆಗಳು) ಮೂಲಕ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ರವರ ಜಂಟಿ ಖಾತೆಗಳಿಗೆ ಬಿಡುಗಡೆಗೊಳಿಸುವ ವ್ಯವಸ್ಥೆ ಮಾಡಲಾಗಿದೆ. ಇದರಂತೆ ರಾಜ್ಯ ಹಂತದಲ್ಲಿ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪದನಾಮದಲ್ಲಿ ಒಂದು ಕೇಂದ್ರಿತ Parent ಬ್ಯಾಂಕ್ ಖಾತೆಯನ್ನು ತೆರೆಯಲಾಗಿದೆ. ಹಾಗೆಯೇ 31 ಜಿಲ್ಲೆಗಳಲ್ಲಿ ಒಂದು ಪ್ರತ್ಯೇಕ Child ಬ್ಯಾಂಕ್ ಖಾತೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿ ಹಾಗೂ ಶಿಕ್ಷಣಾಧಿಕಾರಿ ಪಿ.ಎಂ. ಪೋಷಣ್ ಇವರ ಜಂಟಿ ಪದನಾಮದಲ್ಲಿ, ಒಟ್ಟು 176 ತಾಲೂಕುಗಳಲ್ಲಿ ತಾಲ್ಲೂಕು ಹಂತದಲ್ಲಿ ಒಂದು ಪ್ರತ್ಯೇಕ Child ಬ್ಯಾಂಕ್ ಖಾತೆಯನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು, ಪಿ.ಎಂ.ಪೋಷಣ್ ಇವರ ಜಂಟಿ ಪದನಾಮದಲ್ಲಿ ಆರಂಭಿಸಲಾಗಿದೆ.

4.2 ಸದರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ತೆರೆಯಲಾಗುವ ಬ್ಯಾಂಕ್ ಖಾತೆಗಳಿಗೆ ಇತರೆ ಯಾವುದೇ ಕಾರ್ಯಕ್ರಮಗಳ ಅನುದಾನ ಮೊತ್ತವನ್ನು ಜಮೆ ಮಾಡತಕ್ಕದ್ದಲ್ಲ.

4.3 ಜಿಲ್ಲಾ ಹಂತದ ಬ್ಯಾಂಕ್ ಖಾತೆಗಳಿಂದ ತಾಲ್ಲೂಕು ಹಂತದ ಬ್ಯಾಂಕ್ ಖಾತೆಗಳಿಗೆ ಮತ್ತು ತಾಲ್ಲೂಕು ಹಂತದ ಬ್ಯಾಂಕ್ ಖಾತೆಗಳಿಂದ ಶಾಲಾ ಹಂತದ MDM ಜಂಟಿ ಬ್ಯಾಂಕ್ ಖಾತೆಗಳಿಗೆ APF ಸಂಸ್ಥೆಯು ಬಿಡುಗಡೆಗೊಳಿಸಿದ ಅನುದಾನವನ್ನು ವರ್ಗಾವಣೆ ಮಾಡಿ ಜಮೆ ಮಾಡಲು ಸಂಬಂಧಪಟ್ಟ ಬ್ಯಾಂಕ್‌ಗಳು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ. ಸದರಿ ಕಾರ್ಯಕ್ರಮಕ್ಕಾಗಿ ಮ್ಯಾಪಿಂಗ್ ಮಾಡಲಾಗಿರುವ ಬ್ಯಾಂಕ್ ಖಾತೆಗಳ ಹೊರತಾಗಿ ಇತರೆ ಬ್ಯಾಂಕ್ ಖಾತೆಗಳಿಗೆ ಅನುದಾನವನ್ನು ವರ್ಗಾಯಿಸಲು ಕಡ್ಡಾಯವಾಗಿ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಇವರ ಅನುಮೋದನೆ ಪಡೆಯತಕ್ಕದ್ದು.

4.4 ತಾಲ್ಲೂಕು ಪಂಚಾಯತ್ ಲೆಕ್ಕಾಧಿಕಾರಿಗಳು ಪ್ರತಿ ವಾರ ತಾಲ್ಲೂಕು ಹಂತದಲ್ಲಿ ಬ್ಯಾಂಕ್ ಖಾತೆಗಳ ಮರು ಹೊಂದಾಣಿಕೆ (Reconciliation) ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

4.5 ಪ್ರತಿ ತಿಂಗಳು ಜಿಲ್ಲಾ ಪಂಚಾಯತ್ ಲೆಕ್ಕಾಧಿಕಾರಿಗಳು ಪ್ರತಿ ವಾರ ಜಿಲ್ಲಾ ಹಂತದಲ್ಲಿ ಬ್ಯಾಂಕ್ ಖಾತೆಗಳ Reconciliation ಕಾರ್ಯವನ್ನು ನಿರ್ವಹಿಸತಕ್ಕದ್ದು ಮತ್ತು ಜಿಲ್ಲಾವಾರು ಹಂತದ ಬ್ಯಾಂಕ್ ಖಾತೆಗಳ Reconciliation ವರದಿಗಳನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸತಕ್ಕದ್ದು.

4.6 ಸದರಿ ಕಾರ್ಯಕ್ರಮದಡಿ ಬಿಡುಗಡೆ ಮಾಡಲಾಗಿರುವ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ಕ್ರೋಢಿಕೃತ ಬಳಕೆ ಪ್ರಮಾಣ ಪತ್ರಗಳನ್ನು(Utilisation Certificate), ಶಾಲಾ ಹಂತದಿಂದ ತಾಲ್ಲೂಕು ಹಂತಕ್ಕೆ, ತಾಲ್ಲೂಕು ಹಂತದಿಂದ ಜಿಲ್ಲಾ ಹಂತಕ್ಕೆ, ಜಿಲ್ಲೆಗಳಿಂದ ಕ್ರೋಢಿಕೃತ ಬಳಕೆ ಪ್ರಮಾಣ ಪತ್ರಗಳನ್ನು ರಾಜ್ಯ ಹಂತಕ್ಕೆ ಅಂದರೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಇವರಿಗೆ ಪರಿಶೀಲನೆಗೆ ಪ್ರತಿ ತಿಂಗಳು ಸಲ್ಲಿಸತಕ್ಕದ್ದು.

4.7 ಪ್ರತಿ ತಿಂಗಳು ಸಲ್ಲಿಸಿರುವ ಜಿಲ್ಲಾವಾರು ಬಳಕೆ ಪ್ರಮಾಣ ಪತ್ರಗಳನ್ನು(Utilisation Certificate), ಪ್ರತಿ ತಿಂಗಳು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿರುವ

ವಿವರಗಳನ್ನು ಮತ್ತು ಕ್ರೋಢಿಕೃತ ಬಳಕೆ ಪ್ರಮಾಣ ಪತ್ರಗಳನ್ನು ಪ್ರತಿ ತಿಂಗಳು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.

5. ಶಾಲಾ ಹಂತದಲ್ಲಿ ನಿರ್ವಹಿಸಬೇಕಾದ ಪ್ರಮುಖ ದಾಖಲೆಗಳು:

5.1 ವಿದ್ಯಾರ್ಥಿಯ ದೇಹದ ತೂಕ-ಎತ್ತರ ಅಳತೆ ದಾಖಲೆ ವಹಿ : ಕಾರ್ಯಕ್ರಮ ಆರಂಭಿಸುವ ಪೂರ್ವದಲ್ಲಿ ಪ್ರತಿ ವಿದ್ಯಾರ್ಥಿಯ ದೇಹದ ಎತ್ತರ, ತೂಕ ಅಳತೆ ಮಾಡಿ ತರಗತಿವಾರು ವಿದ್ಯಾರ್ಥಿವಾರು ದಾಖಲೆ ವಹಿ ನಿರ್ವಹಿಸಬೇಕು. ಪ್ರತಿ ತಿಂಗಳು ಅಂತ್ಯದಲ್ಲಿ ಸದರಿ Measurement ದತ್ತಾಂಶಗಳನ್ನು ಸಂಗ್ರಹಿಸಿಕೊಂಡು ಪ್ರತ್ಯೇಕವಾದ ದಾಖಲೆವಹಿಯಲ್ಲಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ನಮೂದಿಸಿ ನಿರ್ವಹಿಸಿಡಬೇಕು. ಇದನ್ನು ವಾರ್ಷಿಕವಾಗಿ ಕ್ರೋಢೀಕರಿಸಿ, ವಿಶ್ಲೇಷಣೆ ಮಾಡಿ ವಿದ್ಯಾರ್ಥಿಯ ದೈಹಿಕ ಬೆಳವಣಿಗೆಯಲ್ಲಿ (Physical growth) ಉಂಟಾಗುವ ಪರಿಣಾಮಗಳನ್ನು ಪ್ರಗತಿಯನ್ನು ಗುರುತಿಸಿಕೊಳ್ಳಬೇಕು. ಈ ಕೆಲಸದಲ್ಲಿ ತರಗತಿ ಶಿಕ್ಷಕರ ಸಹಾಯವನ್ನು ತೆಗೆದುಕೊಳ್ಳಬೇಕು. ತಾಲ್ಲೂಕು ದೈಹಿಕ ಶಿಕ್ಷಣ ಅಧಿಕಾರಿಗಳು ಈ ಸಂಬಂಧ ಮೇಲ್ವಿಚಾರಣೆ ನಡೆಸತಕ್ಕದ್ದು.

5.2 ತರಗತಿವಾರು, ವಿದ್ಯಾರ್ಥಿವಾರು ಪೂರಕ ಪೌಷ್ಠಿಕ ಆಹಾರ ವಿತರಣೆ ವಹಿ: ಶಾಲೆಯ ಪ್ರತಿಯೊಬ್ಬ ಫಲಾನುಭವಿ ವಿದ್ಯಾರ್ಥಿಯ ತನ್ನ ಅಪೇಕ್ಷೆಯಂತೆ ಆಯ್ಕೆಮಾಡಿರುವ ಮತ್ತು ಸ್ವೀಕರಿಸುವ ಪೂರಕ ಪೌಷ್ಠಿಕ ಆಹಾರವನ್ನು ಶಾಲಾ ಕರ್ತವ್ಯದ ದಿನಗಳಿಗೆ ಅನುಗುಣವಾಗಿ ವಿತರಿಸಿರುವ ಕುರಿತಾಗಿ ಪೂರಕವಾಗಿ " ದೈನಂದಿನ ತರಗತಿವಾರು ಫಲಾನುಭವಿ ವಿದ್ಯಾರ್ಥಿಗಳ ಸ್ವೀಕೃತಿ ವಹಿ " (ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿಯನ್ನು ಸ್ವೀಕರಿಸಿದ ವಿದ್ಯಾರ್ಥಿ ಫಲಾನುಭವಿಗಳ ಮಾಹಿತಿಗಾಗಿ ಪ್ರತ್ಯೇಕ ಸ್ವೀಕೃತಿ ನಿರ್ವಹಿಸುವುದು.), ಇದನ್ನು ತಾಳೆ ಮಾಡಲು, ತರಗತಿಯಲ್ಲಿ " ಹಾಜರಾತಿ ತೆಗೆದುಕೊಂಡ ದಾಖಲೆ ವಹಿಯನ್ನು" ತರಗತಿ ಶಿಕ್ಷಕರು ಪ್ರತಿ. ಮಾಸಿಕ ಇಟ್ಟು ನಿರ್ವಹಿಸುವುದು.

5:3 ಆಹಾರ ದಾಸ್ತಾನು ಖರೀದಿ, ವಿತರಣೆ ಲೆಕ್ಕವಿವರ ವಹಿ : ಈ ವಹಿಯಲ್ಲಿ ದಿನಾಂಕವಾರು ನಿರ್ವಹಿಸಿ ಯಾವ ದಿನಾಂಕದಂದು ಯಾವ ಸರಬರಾಜುದಾರರಿಂದ ಎಷ್ಟು ಪ್ರಮಾಣದಲ್ಲಿ ಪೂರಕ ಪೌಷ್ಠಿಕ ಆಹಾರ ಪದಾರ್ಥವನ್ನು ಸ್ವೀಕರಿಸಿದೆ, ದಾಸ್ತಾನಿಗೆ ತೆಗೆದುಕೊಳ್ಳಲಾಗಿದೆ, ಅದರ ದರ, ಭರಿಸಿರುವ ಖರ್ಚು-ವೆಚ್ಚದ ಲೆಕ್ಕವಿವರವನ್ನು ನಮೂದಿಸಿ ನಿರ್ವಹಿಸುವುದು. ದಾಸ್ತಾನುವಿನಿಂದ ದೈನಂದಿನ ವಿತರಣೆ ಮಾಡಿರುವ ಪ್ರಮಾಣದ ಲೆಕ್ಕವಿವರವನ್ನು ನಮೂದಿಸಿ ನಿರ್ವಹಿಸುವುದು. ಈ ದಾಖಲೆ ವಹಿಯಲ್ಲಿ ಸರ್ಕಾರದ ಅನುದಾನದಿಂದ ಭರಿಸುವ ವೆಚ್ಚದ ಬಗ್ಗೆ, ಹಾಗೂ APF ಸಂಸ್ಥೆಯ ಅನುದಾನದಿಂದ ಭರಿಸುವ ಖರ್ಚು ವೆಚ್ಚಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.

5.4 APF ಆಡಿಟ್ ಸಮಿತಿಯು ಕಾಲಕಾಲಕ್ಕೆ ನಡೆಸುವ ಲೆಕ್ಕತಪಾಸಣೆಗೆ ಅನುದಾನ ಬಳಕೆಯ ಈ ಮೇಲ್ಕಂಡ ಪ್ರಮುಖ ದಾಖಲೆಗಳನ್ನು ಸಂಬಂಧ ಪಟ್ಟ ಶಾಲೆಗಳ ಮುಖ್ಯಸ್ಥರು ಹಾಗೂ ಸ್ವಯಂ ಸೇವಾ ಸಂಸ್ಥೆಯವರು ಕಡ್ಡಾಯವಾಗಿ ಹಾಜರುಪಡಿಸುವಂತೆ ಸೂಚಿಸಿದೆ.

6. **ಮೇಲ್ವಿಚಾರಣೆ, ಮೌಲ್ಯಮಾಪನ, ತಪಾಸಣೆ ಮತ್ತು ವರದಿ ಮಾಡುವ ಕ್ರಮಗಳು:**

ಈ ಕೆಳಕಂಡ ಕ್ಲಸ್ಟರ್, ತಾಲ್ಲೂಕು/ಬ್ಲಾಕ್ ವಲಯದ, ಜಿಲ್ಲಾ ಹಂತದ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳುವ ಅಧಿಕಾರಿಗಳು ಸದರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಆಗಾಗ್ಗೆ ಪ್ರಗತಿ ಪರಿಶೀಲನೆಯ ಸಭೆಗಳನ್ನು ತಮ್ಮ ವ್ಯಾಪ್ತಿಯಲ್ಲಿ ನಡೆಸಿ, ಆಗಾಗ್ಗೆ ಶಾಲೆಗಳಿಗೆ ಭೇಟಿ ಕೊಟ್ಟು ಅನುಷ್ಠಾನದ ಪ್ರಗತಿಯನ್ನು, ಅನುದಾನದ ಸದ್ಬಳಕೆಯನ್ನು ಅವಲೋಕಿಸಿ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಶಾಲಾ ಹಂತದಲ್ಲಿ ನೀಡಲಾದ ವರದಿ ನಮೂನೆಗಳನ್ನು ಸಕಾಲದಲ್ಲಿ ಭರ್ತಿಮಾಡಿಸಿ ಪ್ರತಿ ಮಾಸಿಕ ಮಾಹಿತಿಯೊಂದಿಗೆ ಶಾಲೆಯಿಂದ ತಾಲ್ಲೂಕು, ತಾಲ್ಲೋಕಿನಿಂದ ಜಿಲ್ಲೆಗೆ, ಜಿಲ್ಲೆಯಿಂದ ರಾಜ್ಯ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವ ಕ್ರಮವಹಿಸುವಂತೆ ಸೂಚಿಸಿದೆ. ಇದರಿಂದಾಗಿ ಶಾಲಾವಾರು ವಿದ್ಯಾರ್ಥಿ ಫಲಾನುಭವಿಗಳ ಹಾಜರಾತಿ, ಪೂರಕ ಪೌಷ್ಠಿಕ ಆಹಾರದ ಖರೀದಿ, ದಾಸ್ತಾನು, ವಿತರಣೆ, ಆಹಾರದ ಬೇಡಿಕೆಗೆ ಅನುಗುಣವಾಗಿ ಅಗತ್ಯವಾದ ಅನುದಾನ ಬಿಡುಗಡೆ, ಬಳಕೆಯ ಲೆಕ್ಕವಿವರ ಸಮರ್ಪಕವಾಗಿ ಪಡೆಯಲು ಸಹಾಯವಾಗುತ್ತದೆ.

ಶಾಲಾ ಹಂತದಲ್ಲಿ	ಮುಖ್ಯಶಿಕ್ಷಕರು, ಎಸ್.ಡಿ.ಎಂ,ಸಿ./ ಎಂ.ಎಂ.ಸಿ. ತಾಯಂದಿರ ಸಮಿತಿ, ಖರೀದಿ ಸಮಿತಿ. ನೋಡಲ್ ಶಿಕ್ಷಕರು, ಅಡುಗೆ ಸಿಬ್ಬಂದಿ, ತರಗತಿ ಶಿಕ್ಷಕರು ದೈಹಿಕ ಶಿಕ್ಷಣ ಶಿಕ್ಷಕರು,	ಎಸ್.ಓ.ಪಿ.ಯಂತೆ ಆಹಾರ ಖರೀದಿ, ದಾಸ್ತಾನು, ಗುಣಮಟ್ಟ, ಸ್ವಚ್ಛತೆ, ಸುರಕ್ಷತೆ ಮತ್ತು ನಿಗಧಿತ ಪ್ರಮಾಣದಲ್ಲಿ ಇಲಾಖಾ ವೇಳಾಪಟ್ಟಿಯಂತೆ ಶಾಲಾ ದಿನಗಳಂದು ವಿತರಣೆ, ವಿದ್ಯಾರ್ಥಿ ಫಲಾನುಭವಿಗಳ ಹಾಜರಾತಿ, ಆಹಾರ ಶುಚಿ-ರುಚಿ ಪರೀಕ್ಷೆ . ತರಗತಿವಾರು ವಿದ್ಯಾರ್ಥಿ ಫಲಾನುಭವಿಗಳ ಸ್ವೀಕೃತಿ ಮತ್ತು ವಿತರಣೆ ವಹಿ ನಿರ್ವಹಣೆ. ವಿದ್ಯಾರ್ಥಿಗಳ ದೈಹಿಕ ತೂಕ- ಎತ್ತರ ಅಳತೆ ಮಾಡಿ ದತ್ತಾಂಶಗಳ ಮಾಸಿಕ ದಾಖಲೆ ನಿರ್ವಹಿಸಿ ವರದಿ ಮಾಡುವುದು.
ಕ್ಲಸ್ಟರ್ ಹಂತದಲ್ಲಿ	ಸಿ.ಆರ್.ಪಿ. ಗಳು	ಶಾಲಾವಾರು ಆಗಾಗ್ಗೆ ಭೇಟಿ, ವಿದ್ಯಾರ್ಥಿ ಫಲಾನುಭವಿಗಳ ಹಾಜರಾತಿ ತಪಾಸಣೆ, ಖರೀದಿ, ದಾಸ್ತಾನು, ವಿತರಣೆ , ಸ್ವೀಕೃತಿ, ಅನುದಾನ ಬಳಕೆ ದಾಖಲೆಗಳ ಪರಿಶೀಲನೆ , ಶುಚಿ-ರುಚಿ ಪರೀಕ್ಷೆ, ಶಾಲೆಗಳಿಗೆ ಭೇಟಿ ನೀಡಿ ಶಾಲಾವಾರು ವರದಿಯ ಒಂದು ಪ್ರತಿಯನ್ನು ತಾಲ್ಲೂಕು ಪಂಚಾಯತ್ ಮಧ್ಯಾಹ್ನ ಉಪಹಾರ - ಸಹಾಯಕ ನಿರ್ದೇಶಕರಿಗೆ ವಾರಕ್ಕೊಮ್ಮೆ ಸಲಹೆ - ಅಭಿಪ್ರಾಯಗಳೊಂದಿಗೆ ಸಲ್ಲಿಸಿ ಕೂಡಲೇ ಮುಂದಿನ ಸೂಕ್ತ ಕ್ರಮಕ್ಕಾಗಿ ವರದಿ ಮಾಡುವುದು.
ತಾಲ್ಲೂಕು / ಬ್ಲಾಕ್ ಹಂತದಲ್ಲಿ	ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ, ಕ್ಷೇತ್ರಶಿಕ್ಷಣಾಧಿಕಾರಿ,	ಶಾಲಾವಾರು ಭೇಟಿ, ವಿದ್ಯಾರ್ಥಿ ಫಲಾನುಭವಿಗಳ ಹಾಜರಾತಿ ತಪಾಸಣೆ, ಖರೀದಿ, ದಾಸ್ತಾನು, ವಿತರಣೆ, ಸ್ವೀಕೃತಿ , ಅನುದಾನ ಬಳಕೆಯ ದಾಖಲೆಗಳ ಪರಿಶೀಲನೆ, ಕಾರ್ಯಕ್ರಮದ ಪರಿಣಾಮಗಳ ಬಗ್ಗೆ ಅಭಿಪ್ರಾಯ ಕ್ರೋಢಿಕರಿಸಿ ವರದಿಗಳನ್ನು ಜಿಲ್ಲಾ ಹಂತಕ್ಕೆ ಸಲ್ಲಿಸುವುದು. ಪಿ ಮಧ್ಯಾಹ್ನ ಉಪಹಾರ ಸಹಾಯಕ ನಿರ್ದೇಶಕರು ಶಾಲಾವಾರು ಪ್ರಗತಿ ಸಾಧನೆ,

	ಸಹಾಯಕ ನಿರ್ದೇಶಕರು- ಪಿ.ಎಂ.ಪೋಷಣ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ತಾಲೂಕು ದೈಹಿಕ ಶಿಕ್ಷಣ ಅಧಿಕಾರಿಗಳು (TPEO)	ಕುಂದುಕೊರತೆಗಳು. ಆಹಾರ ಬೇಡಿಕೆ, ಅನುದಾನ ಬೇಡಿಕೆ ಬಗ್ಗೆ ವರದಿಯನ್ನು ಜಿಲ್ಲಾ ಹಂತಕ್ಕೆ ಸಲ್ಲಿಸುವುದು. ಶುಚಿ-ರುಚಿ ಪರೀಕ್ಷೆ, ಮಕ್ಕಳ ತೂಕ ಮತ್ತು ಎತ್ತರ ಅಳತೆ ದಾಖಲೆ ನಿರ್ವಹಣೆ, ಆಹಾರ ಪರೀಕ್ಷೆ, ಸುರಕ್ಷತಾ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವುದು. ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯ ಬಗ್ಗೆ, ಕ್ಷೇತ್ರಶಿಕ್ಷಣಾಧಿಕಾರಿಯವರು ಸಹಾಯಕ ನಿರ್ದೇಶಕರೊಂದಿಗೆ, ಇಲ್ಲವೇ ಬಿ.ಆರ್.ಸಿ.ಯೊಂದಿಗೆ ಜಂಟಿಯಾಗಿ ಕೈಗೊಂಡ ಶಾಲಾ ಭೇಟಿಯ ವರದಿಯ ಒಂದು ಪ್ರತಿಯನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮುಂದಿನ ಕ್ರಮಕ್ಕಾಗಿ ಸಲಹೆ-ಅಭಿಪ್ರಾಯಗಳೊಂದಿಗೆ ಪ್ರತಿ ಮಾಸಿಕ ಸಲ್ಲಿಸಿ ವರದಿ ಮಾಡುವುದು.
ಜಿಲ್ಲಾ ಹಂತದಲ್ಲಿ	ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿ – ಪಿ.ಎಂ.ಪೋಷಣ್,	ತಾಲ್ಲೂಕು/ಬ್ಲಾಕ್ ಹಂತದಿಂದ ಸ್ವೀಕರಿಸಿದ ಕ್ರೋಢಿಕರಿಸಿದ ವರದಿಗಳ, ಮಾಹಿತಿಗಳ ವಿಶ್ಲೇಷಣೆ, ರಾಜ್ಯ ಕಛೇರಿಗೆ ಜಿಲ್ಲಾ ಪ್ರಗತಿ ವರದಿಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವುದು. ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆಗಳು, ಅನುದಾನ ಬಿಡುಗಡೆ ಮತ್ತು ಬಳಕೆಯ ಪ್ರಗತಿ ಪರಿಶೀಲನೆ, ಶಾಲಾ ಭೇಟಿ, ಅವಲೋಕನ, ಮೇಲ್ವಿಚಾರಣೆ, ತಪಾಸಣೆ ಮತ್ತು ಕುಂದು ಕೊರತೆಗಳ ನಿವಾರಣೆ ಮಾಡುವುದು. ಶಿಕ್ಷಣಾಧಿಕಾರಿ – ಮಧ್ಯಾಹ್ನ ಉಪಹಾರ ಮತ್ತು ಸಹಾಯಕ ನಿರ್ದೇಶಕರು ಇವರೊಂದಿಗೆ ಕೈಗೊಂಡ ತಾಲ್ಲೂಕುವಾರು ಜಂಟಿ ಶಾಲಾ ತಪಾಸಣೆಯ ಒಂದು ಪ್ರತಿಯನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮುಂದಿನ ಕ್ರಮಕ್ಕಾಗಿ ಸಲಹೆ-ಮಾರ್ಗದರ್ಶನ-ಅಭಿಪ್ರಾಯಗಳ ಕುರಿತಂತೆ ಪ್ರತಿ ಮಾಸಿಕ ಸಲ್ಲಿಸುವುದು. ಪ್ರತಿ ಜಿಲ್ಲೆಯಿಂದ ಉಪನಿರ್ದೇಶಕರು (ಆಡಳಿತ) ರವರು ಕಾರ್ಯಕ್ರಮದ ಅನುಷ್ಠಾನದ ಕುರಿತಂತೆ, ಮಾಸಿಕ ಜಿಲ್ಲಾ ಪ್ರಗತಿ ವರದಿಯನ್ನು District Comprehensive Progress Report ತಾಲ್ಲೂಕುವಾರು ಅವಲೋಕಿಸಿ ಕ್ರೋಢೀಕರಿಸಿ ರಾಜ್ಯ ಕಛೇರಿಗೆ ತಪ್ಪದೇ ಸಲ್ಲಿಸಿ ವರದಿ ಮಾಡುವುದು.
ವಿಭಾಗೀಯ ಹಂತದಲ್ಲಿ	ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ಮತ್ತು ಧಾರವಾಡ ವಿಭಾಗ, ಜಂಟಿ ನಿರ್ದೇಶಕರು, ಮೈಸೂರು, ಬೆಂಗಳೂರು ವಿಭಾಗ	ವಿಭಾಗೀಯ ಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆ , ಶಾಲೆಗಳಿಗೆ ಭೇಟಿ, ಮಾಸಿಕ ಪ್ರಗತಿ ಪರಿಶೀಲನೆ ಸಭೆಗಳನ್ನು ನಡೆಸುವುದು , ಸಲಹೆ-ಮಾರ್ಗದರ್ಶನ ನೀಡುವುದು.

ರಾಜ್ಯ ಹಂತದಲ್ಲಿ	ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನಿರ್ದೇಶಕರು- ಪಿ.ಎಂ.ಪೋಷಣ್, ಜಂಟಿ ನಿರ್ದೇಶಕರು – ಪಿ.ಎಂ.ಪೋಷಣ್, ಹಿರಿಯ ಸಹಾಯಕ ನಿರ್ದೇಶಕರು ನಾಲ್ಕು ವಿಭಾಗಗಳ ಸಹಾಯಕ ನಿರ್ದೇಶಕರು	ರಾಜ್ಯ ಮಟ್ಟದ ಮೇಲ್ವಿಚಾರಣೆ, ಜಿಲ್ಲಾವಾರು ಪ್ರಗತಿ ಪರಿಶೀಲನೆ ಮತ್ತು ಮಾಸಿಕ ಪ್ರಗತಿ ಪರಿಶೀಲನೆಯ ಸಭೆಗಳು, ಜಿಲ್ಲಾವಾರು ವರದಿಗಳ ಅವಲೋಕನ, ವಿಶ್ಲೇಷಣೆ ಹಾಗೂ ಅನುದಾನ ಬಿಡುಗಡೆ ಮತ್ತು ಬಳಕೆಯ ಪರಿಶೀಲನೆ ಕಾರ್ಯಕ್ರಮದ ಅನುಷ್ಠಾನದಿಂದಾಗಿರುವ ಶೈಕ್ಷಣಿಕ ಪರಿಣಾಮಗಳ ಪರಿಶೀಲನೆ ಮತ್ತು ಪರಾಮರ್ಶೆ, ಅನುಷ್ಠಾನದ ಕುಂದುಕೊರತೆಗಳ ಪರಿಶೀಲನೆ,

ಮೇಲ್ಕಂಡ ಮಾರ್ಗಸೂಚಿಯಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾರದಲ್ಲಿ ಎಲ್ಲಾ 6 ಶಾಲಾ ದಿನಗಳಂದು ರಾಜ್ಯ ಸರ್ಕಾರದ ಅನುದಾನ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್ (APF) ಸಂಸ್ಥೆಯ ಒಡಂಬಡಿಕೆಯಂತೆ ಮುಂದಿನ ಮೂರು ವರ್ಷಗಳ ಅವಧಿಗೆ ನೀಡುವ ಆರ್ಥಿಕ ನೆರವಿನೊಂದಿಗೆ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸುವ ಕಾರ್ಯಕ್ರಮದ ಅನುಷ್ಠಾನವನ್ನು ಸೂಕ್ತ ಮೇಲ್ವಿಚಾರಣೆಯೊಂದಿಗೆ ಯಶಸ್ವಿಯಾಗಿ ಕೈಗೊಳ್ಳುವಂತೆ, ಸೂಕ್ತ ಕಾರ್ಯಸಮನ್ವಯತೆಯಿಂದ ತಂಡಗಳಲ್ಲಿ ಖುದ್ದು ಪರಿಶೀಲಿಸಿ ಕಾರ್ಯಕ್ರಮದ ಪ್ರಗತಿ ವರದಿಯನ್ನು ಕಾಲಕಾಲಕ್ಕೆ ಶಾಲೆಗಳಿಂದ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಕಛೇರಿಗೆ ಸಲ್ಲಿಸುವಂತೆ, ಸಂಬಂಧಿಸಿದ ಎಲ್ಲಾ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ವಿಭಾಗಗಳು, ವಿಭಾಗೀಯ ಸಹ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಇವರು ತಮ್ಮ ವಿಭಾಗಗಳ ವ್ಯಾಪ್ತಿಯಲ್ಲಿರುವ ಜಿಲ್ಲೆಗಳ ಶಾಲೆಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸುವುದು. ಜಿಲ್ಲಾವಾರು ಮೇಲ್ವಿಚಾರಕ ಅಧಿಕಾರಿಗಳೊಂದಿಗೆ ಮಾಸಿಕ ಪ್ರಗತಿ ಪರಿಶೀಲನೆಯ ಸಭೆಗಳನ್ನು ನಡೆಸಿ ವರದಿಯನ್ನು ಪಡೆಯವುದು. ಪ್ರತಿ ಮಾಸಿಕ ಜಿಲ್ಲಾವಾರು ಪ್ರಗತಿ ವರದಿಗಳನ್ನು ಕ್ರೋಢೀಕರಿಸಿ ರಾಜ್ಯ ಕಛೇರಿಗೆ ಸಲಹೆ-ಅಭಿಪ್ರಾಯಗಳೊಂದಿಗೆ ಸಲ್ಲಿಸುವುದು. ಯಶಸ್ವಿ ಅನುಷ್ಠಾನಕ್ಕಾಗಿ ಸೂಕ್ತ ಕಾರ್ಯಸಮನ್ವಯತೆಯೊಂದಿಗೆ ಆಸಕ್ತಿಯಿಂದ, ಕಾಳಜಿಯಿಂದ ಭಾಗವಹಿಸುವಂತೆ ತಮ್ಮ ಅಧೀನ ಜಿಲ್ಲೆಗಳ ಮೇಲ್ವಿಚಾರಕ ಅಧಿಕಾರಿ ಸಿಬ್ಬಂದಿಗಳಿಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡುವುದು.

ರಾಜ್ಯ ಸರ್ಕಾರದ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್ (APF) ಸಂಸ್ಥೆಯ ಆಶಯದಂತೆ ಶಾಲಾ ವಿದ್ಯಾರ್ಥಿಗಳಲ್ಲಿರುವ ಅಪೌಷ್ಟಿಕತೆ, ರಕ್ತ ಹೀನತೆ ಮತ್ತು ಬಹು ಪೋಷಕಾಂಶಗಳ ನ್ಯೂನತೆಯನ್ನು ನಿವಾರಿಸಲು ಉತ್ತಮ ಗುಣಮಟ್ಟದ ಆರೋಗ್ಯಕರ ಪೂರಕ ಪೌಷ್ಟಿಕ ಆಹಾರವನ್ನು ಶಾಲಾ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಬಿಸಿಯೂಟದೊಂದಿಗೆ ಸಮರ್ಪಕವಾಗಿ ವಿತರಿಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಅನುಷ್ಠಾನಾಧಿಕಾರಿಗಳು, ಮೇಲ್ವಿಚಾರಣಾ ಅಧಿಕಾರಿಗಳು, ಮುಖ್ಯಶಿಕ್ಷಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

ಈ ಮಾರ್ಗಸೂಚಿಯೊಂದಿಗೆ APF ಸಂಸ್ಥೆಯೊಂದಿಗೆ ಶಾಲಾ ಶಿಕ್ಷಣ ಇಲಾಖೆ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿರುವ SOP (Standard Operating Procedure) ಕ್ರಮಗಳು , ಪರಿವರ್ತನಾ ವೆಚ್ಚದ ಬಳಕೆಯ ವಿವರ , SNF ಕಾರ್ಯಕ್ರಮದ ಅನುಷ್ಠಾನದ

ವೇಳಾಪಟ್ಟಿಗಳನ್ನು ಅನುಬಂಧಗಳಲ್ಲಿ ಲಗತ್ತಿಸಿದ್ದು, ಶಾಲೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸಲು ಹಾಗೂ ಇದರಂತೆ ಮೇಲ್ವಿಚಾರಕ ಅಧಿಕಾರಿಗಳು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಲು ಹಾಗೂ ಅಗತ್ಯ ಕ್ರಮವಹಿಸಲು ಸೂಚಿಸಿದೆ.

ಬಿ.ಬಿ.ಕಾವೇರಿ, ಭಾಆಸೇ.
ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ,
ಬೆಂಗಳೂರು.

ಇವರ ಅಗತ್ಯ ಕ್ರಮಕ್ಕಾಗಿ :

1. ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್,
2. ಅಪರ ಆಯುಕ್ತರು, ಆಯುಕ್ತಾಲಯ, ಶಾಲಾ ಶಿಕ್ಷಣ ಇಲಾಖೆ, ಕಲ್ಬುರ್ಗಿ,
3. ಅಪರ ಆಯುಕ್ತರು, ಆಯುಕ್ತಾಲಯ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ,
4. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ಆಯುಕ್ತಾಲಯ, ಕಲ್ಬುರ್ಗಿ,
5. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಆಯುಕ್ತಾಲಯ, ಧಾರವಾಡ,
6. ರಾಜ್ಯದ ಎಲ್ಲಾ ಶಾಲಾ ಶಿಕ್ಷಣ ಇಲಾಖೆಯ ವಿಭಾಗೀಯ ಸಹ ನಿರ್ದೇಶಕರು, ಕಲ್ಬುರ್ಗಿ, ಧಾರವಾಡ, ಬೆಂಗಳೂರು ಮತ್ತು ಮೈಸೂರು.
7. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ,
8. ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಮತ್ತು ತರಬೇತಿ ಸಂಸ್ಥೆ (ಡಯಟ್), ಶಾಲಾ ಶಿಕ್ಷಣ ಇಲಾಖೆ,
9. ರಾಜ್ಯದ ಎಲ್ಲಾ ಜಿಲ್ಲೆಗಳ ಶಿಕ್ಷಣಾಧಿಕಾರಿಗಳು - ಪಿ.ಎಂ.ಪೋಷಣ್, ಜಿಲ್ಲಾ ಪಂಚಾಯತ್ ,
10. ರಾಜ್ಯದ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್,
11. ರಾಜ್ಯದ ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ,
12. ರಾಜ್ಯದ ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು - ಪಿ.ಎಂ. ಪೋಷಣ್, ತಾಲ್ಲೂಕು ಪಂಚಾಯತ್,
13. ರಾಜ್ಯದ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಮತ್ತು ಸಿ.ಆರ್.ಪಿ.ಗಳು.
14. ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಸ್ಥರು, ಎಸ್.ಡಿ.ಎಂ.ಸಿ.
15. ರಾಜ್ಯದ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳ (ಎನ್.ಜಿ.ಓ.) ಮುಖ್ಯಸ್ಥರು ಮತ್ತು ಕೋ-ಆರ್ಡಿನೇಟರ್‌ಗಳು
16. ಹಿರಿಯ ಸಹಾಯಕ ನಿರ್ದೇಶಕರು, ಇ-ಗವರ್ನೆನ್ಸ್ ರವರಿಗೆ ನೀಡುತ್ತಾ, ಇಲಾಖೆಯ Web Site ನಲ್ಲಿ ಸುತ್ತೋಲೆಗಳ ವಿಭಾಗದಲ್ಲಿ ಪ್ರಕಟಿಸುವ ಕ್ರಮಕ್ಕಾಗಿ.

ಪ್ರತಿಯನ್ನು –

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸುತ್ತೋಲೆಯ ಕುರಿತು ಮಾನ್ಯ ಸಚಿವರ ಅವಗಾಹನೆಗೆ ತರಲು ಸಲ್ಲಿಸಿದೆ.
3. ಮುಖ್ಯಸ್ಥರು, ಅಜ್ಜೀಂ ಪ್ರೇಮ್‌ಜೀ ಫೌಂಡೇಷನ್ ಫಾರ್ ಡೆವಲೆಪ್‌ಮೆಂಟ್ (APF) ಸಂಸ್ಥೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಕಡತ : ಎಂ-1 ಸಂರಕ್ಷಣೆಗೆ.

ಅನುಬಂಧ-1
SOP ಕ್ರಮಗಳು

ಕರ್ನಾಟಕ ಸರ್ಕಾರ ಮತ್ತು ಅಜಿಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್ (APF) ಸಂಸ್ಥೆಯು ಜಂಟಿಯಾಗಿ ನೀಡಿರುವ ಪೂರಕ ಪೌಷ್ಠಿಕ ಆಹಾರ ಖರೀದಿ, ದಾಸ್ತಾನು, ಸ್ವಚ್ಛತೆ ಮತ್ತು ನೈರ್ಮಲ್ಯ, ಗುಣಮಟ್ಟ, ಪ್ರಮಾಣ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ ವಿತರಣೆ ಸಂಬಂಧ SOP ಕ್ರಮಗಳು (Standard Operating Procedure)

ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಲು ನಿರ್ದಿಷ್ಟಪಡಿಸಿರುವ SOP ಕ್ರಮಗಳನ್ನು ಅನುಪಾಲನೆ ಮಾಡಲು ಈ ಕೆಳಗಿನಂತೆ ಮಾರ್ಗಸೂಚಿ ನೀಡಲಾಗಿದೆ.

1. **ಪೀಠಿಕೆ**

ಈ ಎಸ್.ಒ.ಪಿ **(SOP)** ಯು, ಕರ್ನಾಟಕ ರಾಜ್ಯದಾದ್ಯಂತ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳ **1**ರಿಂದ **10**ನೇ ತರಗತಿಯವರೆಗಿನ ಮಕ್ಕಳಿಗೆ ವಿತರಿಸಲಾಗುವ ಬೇಯಿಸಿದ ಮೊಟ್ಟೆಗಳು ಮತ್ತು ಇತರ ಆರೋಗ್ಯದಾಯಕ ಪೌಷ್ಠಿಕಾಂಶಭರಿತ ಪೂರಕಗಳ (ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿ) ಖರೀದಿ, ಶೇಖರಣೆ, ಅಡುಗೆ ಮತ್ತು ಹಂಚಿಕೆಗೆ ಸಂಬಂಧಿಸಿದಂತೆ ಜಿಲ್ಲೆಗಳು/ ಶಾಲೆಗಳು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಕುರಿತಾಗಿದ್ದು, ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.. ಇತರ ಆರೋಗ್ಯದಾಯಕ ಪೌಷ್ಠಿಕಾಂಶಭರಿತ ಪೂರಕಗಳಲ್ಲಿ ಒಳಗೊಂಡಿರುವ ವಸ್ತುಗಳಿಗೆ ಹೆಚ್ಚುವರಿಯಾಗಿ ಯಾವುದಾದರೂ ವಸ್ತುವನ್ನು ಸೇರಿಸಿದ ಪಕ್ಷದಲ್ಲಿ, ಅಂತಹ ಹೆಚ್ಚುವರಿ ವಸ್ತುಗಳನ್ನು ಒಳಗೊಂಡ ಪರಿಷ್ಕೃತ SOP ಯನ್ನು ರಾಜ್ಯ ಸರ್ಕಾರವು ಹೊರತರುತ್ತದೆ.

2. **ಶಾಲಾ ಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನ:**

2.1 2024ರ ಸೆಪ್ಟೆಂಬರ್ ಮಾಹೆಯಿಂದ ಪ್ರತಿ ವಿದ್ಯಾರ್ಥಿಗೆ ಎಲ್ಲಾ ಶಾಲಾ ದಿನಗಳಲ್ಲಿ ಪೌಷ್ಠಿಕಾಂಶಭರಿತ ಪೂರಕ ಆಹಾರ ದೊರೆಯಲಿದೆ. ಇದು ಬೇಯಿಸಿದ ಮೊಟ್ಟೆ ಅಥವಾ ಮೊಟ್ಟೆಯನ್ನು ಸೇವಿಸದ ವಿದ್ಯಾರ್ಥಿಗಳಿಗಾಗಿ ಬಾಳೆಹಣ್ಣು / ಶೇಂಗಾ ಚಿಕ್ಕಿಯನ್ನು ಒಳಗೊಂಡಿರುತ್ತದೆ. ಈ ಕಾರ್ಯಕ್ರಮವು ರಾಜ್ಯ ಸರ್ಕಾರಿ ಶಾಲೆಗಳ ಮತ್ತು ರಾಜ್ಯ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಶಾಲೆಗಳ 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತದೆ.

2.2 ಪ್ರತಿ ವಿದ್ಯಾರ್ಥಿಗೆ ದೈನಂದಿನ ಒಂದು ಬಾರಿ ವಿತರಣೆಗೆ ನಿಗದಿಪಡಿಸಿರುವ ಘಟಕ ವೆಚ್ಚ ರೂ. 6/- ರ ದರದಲ್ಲಿ ಪೂರಕ ಪೌಷ್ಠಿಕ ಆಹಾರವಾಗಿ ಬೇಯಿಸಿದ ಮೊಟ್ಟೆ, ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗೆ ಬಾಳೆಹಣ್ಣು, ಅಥವಾ ಶೇಂಗಾ ಚಿಕ್ಕಿಯನ್ನು ನಿಗದಿತ ಪ್ರಮಾಣದಲ್ಲಿ ಪಡೆಯುವಂತೆ ವಿತರಣೆಯನ್ನು ಶಾಲಾ ಅಡುಗೆ ಕೇಂದ್ರಗಳನ್ನು ಹೊಂದಿರುವ (School Kitchen Center) ಶಾಲೆಗಳಲ್ಲಿ ಮುಖ್ಯಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಇವರ ಮೇಲ್ವಿಚಾರಣೆ ಮತ್ತು ಉಸ್ತುವಾರಿಯಲ್ಲಿ ಹಾಗೂ ಎಂಡಿಎಂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಿರ್ವಹಿಸುವುದು.

2.3 ಶಾಲಾ ಹಂತದ ಅನುಷ್ಠಾನವನ್ನು ಅನುಷ್ಠಾನಾಧಿಕಾರಿಗಳಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿಗಳು ಪಿ.ಎಂ.ಪೋಷಣ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು ಪಿ.ಎಂ.ಪೋಷಣ್ ರವರು ಖುದ್ದು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು. ಪೂರಕ ಪೌಷ್ಠಿಕ ಆಹಾರ ಖರೀದಿ, ಗುಣಮಟ್ಟ, ಸುರಕ್ಷತೆ, ತರಗತಿವಾರು ಫಲಾನುಭವಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ವಿತರಣೆ ಕುರಿತಂತೆ ಇಲಾಖಾ ನಿಯಮಗಳಂತೆ ನಿರ್ವಹಿಸುತ್ತಿರುವ ಬಗ್ಗೆ ಆಗಾಗ್ಗೆ ಪ್ರಗತಿ ಪರಿಶೀಲಿಸಿ ಅನುಷ್ಠಾನ ಪ್ರಕ್ರಿಯೆಯನ್ನು ಖಾತರಿಪಡಿಸಿಕೊಳ್ಳುವುದು. ಎಲ್ಲಿಯೂ ಆರೋಪಗಳು ಬರದಂತೆ, ಅನುದಾನ ಅಪವ್ಯಯವಾಗದಂತೆ ಮೇಲ್ವಿಚಾರಣೆ ನೋಡಿಕೊಳ್ಳುವುದು. ಕಾರ್ಯಕ್ರಮದ

ನಿರ್ವಹಣೆಯ ಚಟುವಟಿಕೆಗಳ ಪ್ರಗತಿಯನ್ನು ನೋಡಿಕೊಂಡು ಅನುದಾನ ಬಿಡುಗಡೆಗೊಳಿಸುವಂತೆ ಸೂಚಿಸಿದೆ.

3. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಾರ್ಯಕ್ರಮದ ಅನುಷ್ಠಾನ

3.1 ರಾಜ್ಯದ 15 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್ ನೊಂದಿಗೆ ಒಡಂಬಡಿಕೆ ಮಾಡಿಕೊಂಡ ಸ್ವಯಂ ಸೇವಾ ಸಂಸ್ಥೆಗಳು (NGOs) ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಪ್ರತಿ ದಿನ ಸಿದ್ಧಪಡಿಸಿದ ಬಿಸಿಯೂಟ ಸರಬರಾಜುಗೊಳಿಸುತ್ತಿದ್ದು, ಬಿಸಿಯೂಟದೊಂದಿಗೆ ವಾರದ 6 ದಿನಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ತಮ್ಮ ಕೇಂದ್ರಿತ ಅಡುಗೆ ಕೇಂದ್ರಗಳಿಂದ ಸಿದ್ಧಪಡಿಸಿಕೊಂಡು (Centralised Kitchen Center) ಆಯಾ ದಿನದಂದು ಸಿದ್ಧಪಡಿಸಿಕೊಂಡು ದೈನಂದಿನ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಿಂದಿನ ವರ್ಷಗಳಂತೆ ವಿತರಿಸುವ ವ್ಯವಸ್ಥೆ ಮಾಡಿಕೊಳ್ಳುವುದು.

3.2 ಪ್ರತಿ ವಿದ್ಯಾರ್ಥಿಗೆ ವಾರದಲ್ಲಿ ಎಲ್ಲಾ ದಿನಗಳಂದು (ಸರ್ಕಾರ ಅನುದಾನದಿಂದ 2 ದಿನಗಳಂದು, APF ಸಂಸ್ಥೆಯ ಅನುದಾನದಿಂದ 4 ದಿನಗಳಂದು ನಿಗಧಿಪಡಿಸಿರುವಂತೆ ಒಟ್ಟಿನಲ್ಲಿ ವಾರದಲ್ಲಿ ಒಟ್ಟು 6 ಶಾಲಾ ದಿನಗಳಂದು) ದಿನಕ್ಕೆ ಒಂದು ಬಾರಿಗೆ ಪ್ರತಿ ವಿದ್ಯಾರ್ಥಿಗೆ ವಿತರಣೆಗೆ ನಿಗಧಿಪಡಿಸಿರುವ ಘಟಕ ವೆಚ್ಚ ರೂ. 6/- ರ ದರದಲ್ಲಿ ಖರೀದಿಸಿ ಪೂರಕ ಪೌಷ್ಠಿಕ ಆಹಾರವಾಗಿ ಬೇಯಿಸಿದ ಮೊಟ್ಟೆ, ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗೆ ಬಾಳೆಹಣ್ಣು, ಅಥವಾ ಶೇಂಗಾ ಚಿಕ್ಕಿಯನ್ನು ನಿಗದಿತ ಪ್ರಮಾಣದಲ್ಲಿ ವಿತರಿಸಲು SOP ನಿಯಮಗಳಂತೆ ಉತ್ತಮ ಗುಣಮಟ್ಟದಲ್ಲಿ ಪೂರಕ ಪೌಷ್ಠಿಕ ಆಹಾರ ಪದಾರ್ಥಗಳ ಖರೀದಿ ಪ್ರಕ್ರಿಯೆ ಕೈಗೊಳ್ಳುವುದು.

3.3ಪೂರಕ ಪೌಷ್ಠಿಕ ಆಹಾರ ಪದಾರ್ಥಗಳ ಸರಬರಾಜನ್ನು ಸ್ವಚ್ಛತೆ ಹಾಗೂ ಸುರಕ್ಷಿತವಾಗಿ ಶಾಲೆಗೆ, ಸರಬರಾಜುಗೊಳಿಸಿ ಮುಖ್ಯಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ./ ಎಸ್.ಎಂ.ಸಿ. ಮೇಲ್ವಿಚಾರಣೆ ಮತ್ತು ಉಸ್ತುವಾರಿಯಲ್ಲಿ ವಿತರಣೆ ಕ್ರಮವನ್ನು ನಿರ್ವಹಿಸುವುದು.

3.4ಬಿಸಿಯೂಟ ವಿತರಿಸುತ್ತಿರುವ ತಮಗೆ ವಹಿಸಿರುವ ಶಾಲೆಗಳ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಯನ್ನು ಇಲಾಖೆ ಸೂಚಿತ ವಿತರಣಾ ಕ್ರಿಯಾಯೋಜನೆಯ ವೇಳಾಪಟ್ಟಿಯಂತೆ APF ಸಂಸ್ಥೆಯ ಒಡಂಬಡಿಕೆಯಂತೆ ಸಂಸ್ಥೆಯ ಆರ್ಥಿಕ ನೆರವಿನಲ್ಲಿ (ವಾರದ 4 ದಿನಗಳಿಗೆ) ಮತ್ತು ರಾಜ್ಯ ಸರ್ಕಾರದ ಆರ್ಥಿಕ ನೆರವಿನಲ್ಲಿ (ವಾರದ ಉಳಿದ 2 ದಿನಗಳಿಗೆ) ಮುಂದಿನ 3 ವರ್ಷಗಳ ಅವಧಿಗೆ ವಾರಕ್ಕೆ 6 ದಿನಗಳಂದು ವಿತರಿಸುವ ಕ್ರಮವಹಿಸುವುದು.

3.5ಪ್ರತಿ ಮಾಸಿಕ ಅಂತ್ಯಕ್ಕೆ ಶಾಲಾವಾರು ತರಗತಿವಾರು ಹಾಜರಾದ ವಿದ್ಯಾರ್ಥಿ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಪೂರಕ ಪೌಷ್ಠಿಕ ಆಹಾರದ ವಿತರಣೆಗೆ ಭರಿಸುವ ಒಟ್ಟು ಖರ್ಚು-ವೆಚ್ಚಗಳನ್ನು ನಿರ್ವಹಿಸಿ ವಾರದ 2 ದಿನಗಳಿಗೆ ರಾಜ್ಯ ಸರ್ಕಾರದ K-2 ನಿಧಿ-1 ರ ಅನುದಾನದಿಂದ ಮತ್ತು ವಾರದ 4 ದಿನಗಳಿಗೆ APF ಸಂಸ್ಥೆಯ ಅನುದಾನದಿಂದ (ಕೆನರಾ ಬ್ಯಾಂಕ್ ಖಾತೆಯಿಂದ) ಭರಿಸಬೇಕಾದ ವೆಚ್ಚದ ಎರಡು ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗೆ ಸಲ್ಲಿಸಿ ಪಾವತಿ ಪಡೆಯುವುದು.

3.6ಶಾಲಾವಾರು ಖರ್ಚು-ವೆಚ್ಚಗಳ ಬಿಲ್ಲು-ವೋಚರ್‌ಗಳಿಗೆ, ಶಾಲಾ ವಿದ್ಯಾರ್ಥಿಫಲಾನುಭವಿ ಹಾಜರಾತಿ ದಾಖಲೆಗಳಿಗೆ ಶಾಲಾ ಮುಖ್ಯಸ್ಥರಿಂದ, ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು ಪಿ.ಎಂ. ಪೋಷಣ್ ಇವರಿಂದ, ತಾಲ್ಲೂಕು /ಬ್ಲಾಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪರಿಶೀಲನೆಗೆ ಒಳಪಡಿಸಿ ಮೇಲು ಸಹಿ ಪಡೆದು ದಾಖಲೆಗಳನ್ನು ಮಾಸಿಕ ಬಿಲ್ಲುಗಳೊಂದಿಗೆ ಹಣ ಪಾವತಿಗಾಗಿ ಸಲ್ಲಿಸುವುದು.

3.7 ಪೂರಕ ಪೌಷ್ಠಿಕ ಆಹಾರ ಖರೀದಿ ದಾಖಲೆಗಳನ್ನು, ಶಾಲಾವಾರು ಭರಿಸಿರುವ ಖರ್ಚು-ವೆಚ್ಚಗಳ ದಾಖಲೆಗಳನ್ನು, ತರಗತಿವಾರು ವಿದ್ಯಾರ್ಥಿ ಫಲಾನುಭವಿ ಸಂಖ್ಯೆ ಮತ್ತು ವಿತರಣೆಯ ದಾಖಲೆಗಳನ್ನು APF ಸಂಸ್ಥೆಯ ಆಡಿಟ್ ಸಮಿತಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಅಗತ್ಯ ಪರಿಶೀಲನೆಗೆ ತಪ್ಪದೇ ಒದಗಿಸುವುದು.

3.8 ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಕಛೇರಿಗೆ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಗಳ ವಿವರವನ್ನು ಸಲ್ಲಿಸಿ ವೆಚ್ಚಗಳ ಬಿಲ್ಲು ಪಾವತಿಯ ಹಣವನ್ನು ಆಯಾ ಅನುದಾನದ ಮೂಲಗಳಿಂದ ಬಿಲ್ಲು ಪಾವತಿ ಪಡೆಯುವುದು.

3.9 ಪೂರಕ ಪೌಷ್ಟಿಕ ಆಹಾರವನ್ನು ಶಾಲೆಗ ಬಿಡುವು ಇರುವ ದಿನಗಳಂದು, ರಜೆ ಘೋಷಣೆಯಾಗಿದ್ದಲ್ಲಿ ರಜಾ ದಿನಗಳಂದು ವಿತರಿಸುವಂತಿಲ್ಲ. ಕೇವಲ ಶಾಲಾ ದಿನಗಳಂದು ಮಾತ್ರ ಮಧ್ಯಾಹ್ನದ ಬಿಸಿಯೂಟದೊಂದಿಗೆ ವಿದ್ಯಾರ್ಥಿಗಳಿಗೆ ಅವರ ಆಯ್ಕೆಯಂತೆ, ಪೋಷಕರ ಲಿಖಿತ ಒಪ್ಪಿಗೆಯಂತೆ ನಿಗದಿತ ಪ್ರಮಾಣದಲ್ಲಿ ಸುರಕ್ಷಿತ ವಿಧಾನದಲ್ಲಿ ವಿತರಿಸುವುದು.

3.10 ಶಾಲೆಗಳಲ್ಲಿ ಮೊಟ್ಟೆ ಸ್ವೀಕರಿಸುವ ವಿದ್ಯಾರ್ಥಿಗಳಿದ್ದಲ್ಲಿ ಅವರಿಗೆ ಮೊಟ್ಟೆಯನ್ನೇ ವಾರದ ಎಲ್ಲಾ 6 ದಿನಗಳಂದು ಕಡ್ಡಾಯವಾಗಿ ವಿತರಿಸುವುದು. ಯಾವುದೇ ಕಾರಣಕ್ಕೂ ಮೊಟ್ಟೆಯನ್ನು ಸ್ವೀಕರಿಸಲು ಅಪೇಕ್ಷಿಸಿರುವ ವಿದ್ಯಾರ್ಥಿಗಳಿಗೆ ಮೊಟ್ಟೆಯನ್ನು ಹೊರತುಪಡಿಸಿ ಶೇಂಗಾ ಚಿಕ್ಕಿ / ಬಾಳೆಹಣ್ಣು ವಿತರಿಸುವಂತಿಲ್ಲ. ಈ ಕ್ರಮವನ್ನು ಕಟ್ಟುನಿಟ್ಟಾಗಿ ಸ್ವಯಂ ಸೇವಾ ಸಂಸ್ಥೆಗಳು ಅನುಸರಿಸುವಂತೆ ಸೂಚಿಸಿದೆ.

3.11 ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್ ಸಂಸ್ಥೆಯ (APF) ಸಹಭಾಗಿತ್ವದಲ್ಲಿ ಮತ್ತು ಆರ್ಥಿಕ ನೆರವಿನಲ್ಲಿ 2024-25ನೇ ಸಾಲಿನಿಂದ 2026-27ನೇ ಸಾಲಿನವರೆಗೆ (ದಿನಾಂಕ 16-ಸೆಪ್ಟೆಂಬರ್ 2024ರಿಂದ ಆರಂಭಿಸಿ ದಿನಾಂಕ,15-ಸೆಪ್ಟೆಂಬರ್ 2027ರವರೆಗೆ) ತ್ರೈಮಾಸಿಕವಾರು ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಟಿಕ ಆಹಾರವನ್ನು ನೀಡುವ ವಿತರಣೆಯ ಕ್ರಿಯಾಯೋಜನೆಯ ವೇಳಾಪಟ್ಟಿ (Plan of Action) ಯನ್ನು ಅನುಬಂಧ-3 ರಲ್ಲಿ ಇಲಾಖೆಯಿಂದ ನಿಗದಿಪಡಿಸಿದ್ದು, ಇದರಂತೆ ನಿರ್ವಹಿಸಲು ಸೂಚಿಸಿದೆ.

4. **ಖರೀದಿ ಪ್ರಕ್ರಿಯೆ:**

4.1 ಶಾಲಾ ಹಂತದಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಖರೀದಿಸಲು, ಗುಣಮಟ್ಟ ಪರಿಶೀಲಿಸಿ ಖಾತರಿಪಡಿಸಿಕೊಳ್ಳಲು ಖರೀದಿ ಸಮಿತಿ ರಚಿಸಿಕೊಂಡು ಕ್ರಮವಹಿಸುವುದು. ಸದರಿ ಸಮಿತಿಯಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಶಾಲಾ ಮುಖ್ಯಶಿಕ್ಷಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಇಬ್ಬರು ಪೋಷಕರು, ಒಬ್ಬ ಹಿರಿಯ ಶಿಕ್ಷಕರು, ಇಬ್ಬರು ತಾಯಂದಿರು ಇವರು ಸಮಿತಿಯ ಇತರ ಸದಸ್ಯರಾಗಿರುತ್ತಾರೆ. ಇವರನ್ನೊಳಗೊಂಡ ಸಮಿತಿಯು ಪೂರಕ ಪೌಷ್ಟಿಕ ಆಹಾರವನ್ನು ಶಾಲಾ ಬೇಡಿಕೆಗೆ ಅನುಗುಣವಾಗಿ ಖರೀದಿ ಪ್ರಕ್ರಿಯೆಯನ್ನು ಕೆ.ಟಿ.ಟಿ.ಪಿ. ನಿಯಮಗಳು 1999 (ಪರಿಷ್ಕೃತ ಕಾಯಿದೆಯಂತೆ), ಸರ್ಕಾರದ ಆದೇಶ ಸಂಖ್ಯೆ: ಇಪಿ.ಎಂ.ಎಂ.ಎಸ್.2023, ಬೆಂಗಳೂರು, ದಿನಾಂಕ, 09.08.2023ರಂತೆ ನಿರ್ವಹಿಸುವುದು. ಅರ್ಹ ಸರಬರಾಜುದಾರರಿಂದ ದರ ಪಟ್ಟಿ - ಕೊಟೇಶನ್ (ಕನಿಷ್ಠ ಮೂರು ಸರಬರಾಜುದಾರರಿಂದ ಸಲ್ಲಿಸಿದ ದರಪಟ್ಟಿಗಳು) ಪಡೆದು ದರ ಹೋಲಿಕೆ ಮತ್ತು ವಿಶ್ಲೇಷಣೆ ಮಾಡಿ ಮಾರುಕಟ್ಟೆ ದರಕ್ಕಿಂತ ಕಡಿಮೆ, ಸ್ಪರ್ಧಾತ್ಮಕ ದರದಲ್ಲಿ (Competative Price) ಉತ್ತಮ ಗುಣಮಟ್ಟದ ಮತ್ತು ನಿಗದಿತ ಪ್ರಮಾಣದ (Good Quality and Quantity) ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ಖಾತರಿಪಡಿಸಿಕೊಂಡು ನಡವಳಿ ಮಾಡಿ ಖರೀದಿಸುವುದು. ಶಾಲೆಯಲ್ಲಿ ಸುರಕ್ಷಿತ ಕ್ರಮಗಳನ್ನು ಅನುಸರಿಸಿ ವಿತರಣೆಯಾಗುವವರೆಗೂ ದಾಸ್ತಾನು ಇಡುವುದು. ಸರಬರಾಜುಗೊಳಿಸಿದ ನಂತರ ವಿಳಂಬಕ್ಕೆ ಅವಕಾಶ ನೀಡದೇ ಕೂಡಲೇ ಬಿಲ್ಲು-ವೋಚರ್ ಸಲ್ಲಿಸಿದ ಅರ್ಹ ಸರಬರಾಜುದಾರರ ಬ್ಯಾಂಕ್ ಖಾತೆಗೆ ಖರೀದಿ ಸಮಿತಿಯು MDM ಶಾಲಾ ಜಂಟಿ ಬ್ಯಾಂಕ್ ಖಾತೆಯಿಂದ ನೇರ ಹಣ ವರ್ಗಾವಣೆ ಮೂಲಕ ಹಣ ಪಾವತಿಸುವ ಕ್ರಮವಹಿಸುವುದು. ಪೂರಕ ಪೌಷ್ಟಿಕ ಆಹಾರ ಖರೀದಿ ಬಿಲ್ಲು-ವೋಚರ್ ದಾಖಲೆಗಳನ್ನು ಖರೀದಿ ಸಮಿತಿಯ ನಡವಳಿಯ ದಾಖಲೆಯನ್ನು APF ಸಂಸ್ಥೆಯ ಆಡಿಟ್ ಸಮಿತಿಯ ಪರಿಶೀಲನೆಗೆ, ಇಲಾಖೆಯ ಮೇಲ್ವಿಚಾರಕ ಅಧಿಕಾರಿಗಳ ತಪಾಸಣೆಗೆ ಕಡ್ಡಾಯವಾಗಿ ಖರೀದಿ ಸಮಿತಿಯು ಹಾಜರುಪಡಿಸುವಂತೆ ಸೂಚಿಸಿದೆ.

4.2**ಖರೀದಿ ದರ:** ಪ್ರತಿ ವಿದ್ಯಾರ್ಥಿಗೆ ಸರ್ಕಾರ ನಿಗದಿಪಡಿಸಿರುವ ಪ್ರತಿ ದಿನದ ವಿತರಣೆಯ ಪ್ರಸ್ತುತ ಘಟಕ ವೆಚ್ಚ ರೂ. 6/- ರ ದರದ ಮಿತಿಯಲ್ಲಿ ಶಾಲಾ ಖರೀದಿ ಸಮಿತಿ ಪೂರಕ ಪೌಷ್ಟಿಕ ಆಹಾರವನ್ನು ಖರೀದಿಸುವುದು. ಇದಕ್ಕೆ ಸಂಬಂಧಿಸಿದಂತೆ ಲೆಕ್ಕವಿವರ, ಬಿಲ್ಲು-ವೋಚರ್ ದಾಖಲೆಗಳನ್ನು ನಿರ್ವಹಿಸುವುದು.

5. ಕಾರ್ಯಕ್ರಮದ ಪ್ರಚಾರ

ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿತರಿಸುವ ಪೂರಕ ಪೌಷ್ಟಿಕ ಆಹಾರದ ಮೇಲ್ಕಂಡ ವಿವರವನ್ನು ಶಾಲಾ ನೋಟೀಸು ಫಲಕದಲ್ಲಿ, ಅಡುಗೆ ಕೇಂದ್ರದ ಗೋಡೆಯ ಮೇಲೆ ಇಲ್ಲವೇ ಪೋಷಕರಿಗೆ, ಸಾರ್ವಜನಿಕರ ಗಮನಕ್ಕೆ ಬರುವ ಹಾಗೆ ಶಾಲಾ ಗೋಡೆಯ ಮುಂಭಾಗದಲ್ಲಿ ಬರೆಹ ರೂಪದಲ್ಲಿ ಪ್ರಕಟಿಸಿ ಪ್ರಚಾರ ಮಾಡಲು ಕ್ರಮವಹಿಸುವುದು.

6. ಆಹಾರ ಪದಾರ್ಥಗಳ ಸಂಗ್ರಹಣೆ ಮತ್ತು ಸಂರಕ್ಷಣೆ

ಶಾಲಾ ಮುಖ್ಯಶಿಕ್ಷಕರು, ಮುಖ್ಯ ಅಡುಗೆಯವರು / ಸಹಾಯಕ ಅಡುಗೆಯವರು ಶಾಲೆಯ ಆಹಾರ ದಾಸ್ತಾನು ಉಗ್ರಾಣ / ಆಹಾರ ಸಂಗ್ರಹಣಾ ಕೊಠಡಿಯಲ್ಲಿ ಮಾರುಕಟ್ಟೆಯಿಂದ ಖರೀದಿಸಿದ ಇಲ್ಲವೇ ಸರಬರಾಜುದಾರರಿಂದ ಸರಬರಾಜುಗೊಂಡಿರುವ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿಯನ್ನು Egg Trays, Fruity Trays and Plastic Boxes or Stainless Steel Boxes or Containers ಗಳನ್ನು ಖರೀದಿಸಿ ಇವುಗಳಲ್ಲಿ ಸುರಕ್ಷಿತ ವಿಧಾನಗಳಲ್ಲಿ ಮತ್ತು ಸ್ವಚ್ಛತೆಯಿಂದ ಸಂರಕ್ಷಿಸಿಡುವುದು ಹಾಗೂ ಶಾಲಾ ದಿನಗಳಂದು ವಿತರಣೆಯಲ್ಲಿ ಸುರಕ್ಷಿತವಾಗಿ ನಿಗದಿತ ಪ್ರಮಾಣದಲ್ಲಿ ವಿತರಿಸುವ ಕ್ರಮವಹಿಸುವುದು. ಶಾಲಾ ಎಸ್.ಡಿ.ಎಂ.ಸಿ. ಮತ್ತು ಖರೀದಿ ಸಮಿತಿಯು ಈ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಸೂಚಿಸಿದ್ದು, ಸ್ಥಳೀಯ ಮಾರಾಟಗಾರರ, ಆಹಾರ ದಾಸ್ತಾನು ಮಳಿಗೆ ಹೊಂದಿರುವ ಮಾರಾಟಗಾರರ, ಕೃಷಿಕರ, ದಾನಿಗಳ, ಸಹಾಯವನ್ನು ಆಹಾರ ಸಂರಕ್ಷಣೆಗಾಗಿ ಅಗತ್ಯವಿದ್ದಲ್ಲಿ ಪಡೆದುಕೊಳ್ಳುವುದು. ಆಹಾರ ಪದಾರ್ಥಗಳ ಗುಣಮಟ್ಟ ಹಾಳಾಗದಂತೆ, ಅಪವ್ಯಯವಾಗದಂತೆ ನೋಡಿಕೊಳ್ಳತಕ್ಕದ್ದು. ಕಳಪೆಯಾದ, ಕೊಳೆತ ಇಲ್ಲವೇ ಗುಣಮಟ್ಟ ಹಾಳಾಗಿರುವ ಆಹಾರ ಪದಾರ್ಥಗಳನ್ನು ವಿತರಿಸಬಾರದು.

ತಿಂಗಳಿಗೊಮ್ಮೆ ಇಲ್ಲವೇ ವಾರಕ್ಕೆ ಒಮ್ಮೆ ಬೇಡಿಕೆಗೆ ಅನುಗುಣವಾಗಿ ಉತ್ತಮ ಗುಣಮಟ್ಟದಿಂದ, ಸ್ವಚ್ಛತೆಯಿಂದ ಕೂಡಿದ ತಾಜಾ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸರಬರಾಜುದಾರರಿಂದ ಪಡೆಯುವ ಕ್ರಮವನ್ನು ಶಾಲಾ ಮುಖ್ಯಶಿಕ್ಷಕರು ಖರೀದಿ ಸಮಿತಿಯ ನೇತೃತ್ವದಲ್ಲಿ ನಿರ್ವಹಿಸುವುದು.

7. ತ್ಯಾಜ್ಯ ವಿಲೇವಾರಿ

ಶಾಲಾ ಮುಖ್ಯಶಿಕ್ಷಕರು, ಸಹಾಯಕ ಅಡುಗೆಯವರು ಹಾಗೂ ನೋಡಲ್ ಶಿಕ್ಷಕರು ಸದರಿ ಪೂರಕ ಪೌಷ್ಟಿಕ ಆಹಾರ ಮೊಟ್ಟೆ, ಬಾಳೆಹಣ್ಣು/ ಶೇಂಗಾ ಚಿಕ್ಕಿ ವಿತರಣೆಯ ಸಂದರ್ಭದಲ್ಲಿ ಉತ್ಪನ್ನವಾಗುವ ತಾಜ್ಯ ವಸ್ತುಗಳಾದ ಮೊಟ್ಟೆ ಚಿಪ್ಪು, ಬಾಳೆಹಣ್ಣು ಸಿಪ್ಪೆ ಇವುಗಳನ್ನು ಸೂಕ್ತ ವಿಧಾನದಲ್ಲಿ ಸಂಗ್ರಹಿಸಿ, (ಹಸಿ ಕಸ, ಒಣ ಕಸ ಮಾದರಿಯಲ್ಲಿ) ಶಾಲೆಯಿಂದ ಹೊರಭಾಗದಲ್ಲಿ ಒಂದು ಗೊತ್ತಾದ ಸ್ಥಳದಲ್ಲಿ ಕಸ ವಿಲೇವಾರಿ ಮಾಡುವ ಅಥವಾ ಈಗಾಗಲೇ ಗ್ರಾಮ ಪಂಚಾಯತಿ/ಇತರೆ ಯಾವುದೇ ಕಸ ವಿಲೇವಾರಿ ಮಾಡುವ ವ್ಯವಸ್ಥೆ ಮೂಲಕ ನಿರ್ವಹಿಸುವುದು, ಆ ಮೂಲಕ ಶಾಲಾ ವಾತಾವರಣದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವ ವ್ಯವಸ್ಥೆಯನ್ನು ಮಾಡುವಂತೆ ಸೂಚಿಸಿದೆ.

8. ಆಹಾರ ಪದಾರ್ಥಗಳ ಗುಣಮಟ್ಟ ಕಾಯ್ದುಕೊಳ್ಳುವಿಕೆ

8.1 ಮೊಟ್ಟೆ ವಿತರಿಸುವಾಗ ಮುನ್ನೆಚ್ಚರಿಕೆಗಳು

ಉತ್ತಮ ಗುಣಮಟ್ಟದ ಕೋಳಿ ಮೊಟ್ಟೆಯನ್ನು ಕನಿಷ್ಠ ತೂಕ 50 ಗ್ರಾಂಕ್ಕಿಂತ ಹೆಚ್ಚಾಗಿದ್ದು, ಸ್ವಚ್ಛತೆಯಿಂದ ಮತ್ತು ತಾಜಾತನದಿಂದ ಕೂಡಿರಬೇಕು. ಒಡೆದ ಮೊಟ್ಟೆಯನ್ನಾಗಲಿ, ಕೊಳೆತ ಮೊಟ್ಟೆಯನ್ನಾಗಲಿ ವಿತರಿಸಬಾರದು. ಮೊಟ್ಟೆ ಎರಡು ದಿನಗಳಿಗಿಂತ ಇಲ್ಲವೇ ಗರಿಷ್ಠ ಒಂದು ವಾರಕ್ಕಿಂತ ಹಳೆಯದಾಗಿರಬಾರದು. ನೀರಿನಲ್ಲಿ ಮುಳುಗಿಸಿದಾಗ ಪೂರ್ಣ ಮುಳಗಬೇಕು. ಇಲ್ಲವೇ ಅರ್ಧ ಮುಳುಗಿದರೆ ಅದು ಹಳೆಯ ಮತ್ತು ಉತ್ತಮ ಗುಣಮಟ್ಟದಲ್ಲಿರದ ಮೊಟ್ಟೆ ಎಂದು ರಾಂಡಮ್ ಆಗಿ ಪರೀಕ್ಷಿಸಿ ಖಾತರಿಪಡಿಸಿಕೊಂಡು ಮೊಟ್ಟೆ ಖರೀದಿಸಬೇಕು. ಮೊಟ್ಟೆಯನ್ನು ಕನಿಷ್ಠ 12-15 ನಿಮಿಷಗಳ ಕಾಲ ಸ್ವಚ್ಛ ನೀರಿನಲ್ಲಿ ಬೇಯಿಸಬೇಕು. ವಿತರಿಸುವ ಪೂರ್ವದಲ್ಲಿ ಬೆಂದ ಮೊಟ್ಟೆಯ ಚಿಪ್ಪು / ಸಿಪ್ಪೆಯನ್ನು ಸುಲಿದು ಪ್ರತ್ಯೇಕಗೊಳಿಸಬೇಕು. ಒಂದು ವೇಳೆ ಹೀಗೆ ಸಿಪ್ಪೆ ಸುಲಿದ ಬೆಂದ ಮೊಟ್ಟೆ ಕೊಳೆತ ಕೆಟ್ಟ ವಾಸನೆ (Foul smell) ಬರುವಂತಿದ್ದಲ್ಲಿ ಅಂತಹ ಮೊಟ್ಟೆಯನ್ನು ವಿತರಿಸಬಾರದು. ಹಾಗೆಯೇ ಬೆಂದ ಮೊಟ್ಟೆಯಲ್ಲಿ ರಕ್ತದ ಕಲೆಗಳು, ಹೆಪ್ಪುಗಟ್ಟಿದ ರಕ್ತದ ಚಿನ್ಹೆಗಳು

(Blood spots) ಕಂಡು ಬಂದಲ್ಲಿ ಅಂತಹ ಮೊಟ್ಟೆಯನ್ನು ವಿತರಿಸಬಾರದು. ಬೆಂದ ಸಿಪ್ಪೆ ಸುಲಿದ ಮೊಟ್ಟೆಗಳನ್ನು ಸ್ವಚ್ಛವಾದ ನೀರಿನಲ್ಲಿ ತೊಳೆದಿರುವ ಸ್ವಚ್ಛವಾದ ಸ್ಟೀಲ್ ಪಾತ್ರೆಗಳಲ್ಲಿ ತುಂಬಿಕೊಂಡು, ಧೂಳು ರಹಿತವಾಗಿ ಸುರಕ್ಷಿತವಾಗಿ ಸೋಪಿನಿಂದ ತೊಳೆದ ತಮ್ಮ ಕೈಗಳಿಗೆ ಕೈಗವಸು ಹಾಕಿಕೊಂಡು ಅಡುಗೆ ಸಹಾಯಕರು ವಿದ್ಯಾರ್ಥಿಗಳಿಗೆ ಬಿಸಿಯೂಟದ ಸಂದರ್ಭದಲ್ಲಿ ವಿತರಿಸಬೇಕು. ಪ್ರತಿ ದಿನ ಬೇಯಿಸಿದ ಮೊಟ್ಟೆಯನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಪೂರ್ವದಲ್ಲಿ ಶುಚಿ-ರುಚಿ ಪರೀಕ್ಷಿಸಿ Food Tasting Record ನಲ್ಲಿ ಅಭಿಪ್ರಾಯ ದಾಖಲಿಸಿ ಸಹಿ ಹಾಕುವ ಕೆಲಸವನ್ನು ಮುಖ್ಯ ಅಡುಗೆಯವರು, ಸಹಾಯಕ ಅಡುಗೆಯವರು ಇಲ್ಲವೇ ಮುಖ್ಯ ಶಿಕ್ಷಕರು, ನೋಡಲ್ ಶಿಕ್ಷಕರು ಯಾರಾದರೂ ಒಬ್ಬರು ಜವಾಬ್ದಾರಿಯಿಂದ ಮಾಡಿ ಗುಣಮಟ್ಟ ಪರೀಕ್ಷಾ ದಾಖಲೆ ನಿರ್ವಹಿಸುವಂತೆ ಸೂಚಿಸಿದೆ. ವಿತರಣೆಯಲ್ಲಿ First in , First out ಪದ್ಧತಿಯನ್ನು ಅನುಸರಿಸಬೇಕು.

ಶಾಲೆಗಳಲ್ಲಿ ಮೊಟ್ಟೆಯನ್ನು ಸ್ವೀಕರಿಸುವ ಮತ್ತು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ಮೊಟ್ಟೆಯನ್ನೇ ವಿತರಿಸುವುದು. ಮೊಟ್ಟೆಯನ್ನ ಹೊರತುಪಡಿಸಿ ಈ ವಿದ್ಯಾರ್ಥಿಗಳಿಗೆ ಶೇಂಗಾ ಚಿಕ್ಕಿ / ಬಾಳೆಹಣ್ಣು ವಿತರಿಸಬಾರದು. ಈ ಬಗ್ಗೆ ಶಾಲೆಯ ಮುಖ್ಯಸ್ಥರು ಕಟ್ಟುನಿಟ್ಟಾಗಿ ಕ್ರಮವಹಿಸುವುದು.

<u>8.2 ಬಾಳೆಹಣ್ಣು ವಿತರಿಸುವಲ್ಲಿ ಮುನ್ನೆಚ್ಚರಿಕೆಗಳು:</u>

ಅತಿಯಾಗಿ ಹಣ್ಣಾಗಿ ಕೊಳೆತು ಹೋಗಿ ಕಪ್ಪಾಗಿರುವ, ಹುಳ, ಇಲಿ ತಿಂದಿರುವ ಇಲ್ಲವೇ ಹಸಿರಾದ ಗೊನೆಕಾಯಿ ಬಾಳೆಹಣ್ಣನ್ನು ವಿತರಿಸಬಾರದು. ಉತ್ತಮವಾಗಿ ಮಾಗಿದ ರುಚಿಯಿಂದ ಕೂಡಿದ, ಬಾಳೆ ಹಣ್ಣಿನ ಹೊರ ಸಿಪ್ಪೆ ತೆಳು ಹಳದಿ ಬಣ್ಣದಿಂದ ಕೂಡಿದ್ದು, ಕಪ್ಪು ಚುಕ್ಕೆ ಹೊಂದಿರುವ, ಮೆದುವಾಗಿರುವ ತಿನ್ನಲು ಯೋಗ್ಯವಾಗಿರುವ, ಸ್ವಚ್ಛವಾಗಿರುವ, ಸುವಾಸನೆ ಬರುವ ಮಾಗಿದ ಬಾಳೆಹಣ್ಣನ್ನು ಮಾತ್ರ ಖಾತರಿಪಡಿಸಿಕೊಂಡು ವಿತರಿಸುವುದು. ಬಾಳೆಹಣ್ಣನ್ನು ಬಲಿತು ಕಾಯಿಯಾಗಿರುವ ಉತ್ತಮ ಸ್ಥಿತಿಯಲ್ಲಿ ಖರೀದಿಸಿ ಸೂಕ್ತ ವಿಧಾನದಲ್ಲಿ ಮಣ್ಣಿನ ವಾಡೆಗಳಲ್ಲಿ, ಒಣ ಹುಲ್ಲು ಸುತ್ತಿ ಮುಚ್ಚಿ ಶಾಲೆಯ ಉಗ್ರಾಣ ಕೊಠಡಿಯ ಓಪನ್/ಕ್ಲೋಸ್ಡ್ ಕಂಟೈನರ್ ಬಾಕ್ಸ್‌ಗಳಲ್ಲಿ, ತಣ್ಣನೆಯ ಮತ್ತು ಧೂಳು ರಹಿತವಾಗಿರುವ ಒಣ ಪ್ರದೇಶದಲ್ಲಿ ಬಿಸಿಲಿಗೆ ತಾಗದ ಹಾಗೆ ಕೆಲ ದಿನಗಳವರೆಗೆ ಸಂರಕ್ಷಿಸಿ ಇಟ್ಟು ನೈಸರ್ಗಿಕ ವಿಧಾನದಿಂದ ಮಾಗಿಸಬೇಕು. ಈ ವಿಧಾನವನ್ನು ಅನುಸರಿಸಿ ಬಾಳೆಹಣ್ಣನ್ನು ಪೂರೈಸುವ ರೈತರಿಂದ/ಮಾರಾಟಗಾರರಿಂದ ಖರೀದಿಸಬಹುದು. ಮಾಗಿದ ರುಚಿಯಾದ ಹಣ್ಣನ್ನು ಮಾತ್ರ ವಿದ್ಯಾರ್ಥಿಗಳಿಗೆ ನಿಗದಿತ ಪ್ರಮಾಣದಲ್ಲಿ ಬಿಸಿಯೂಟದ ನಂತರ ತಿನ್ನಲು ವಿತರಿಸಬೇಕು. First in, First out ಪದ್ಧತಿಯಲ್ಲಿ ಬಾಳೆಹಣ್ಣು ಮಾಗಿ ಹಾಳಾಗುವ ಮೊದಲೇ ವಿತರಣೆ ಮಾಡಬೇಕು. ಅಡುಗೆ ಸಿಬ್ಬಂದಿ ಯಾವಾಗಲೂ ವೈಯುಕ್ತಿಕ ಸ್ವಚ್ಛತೆ, ನೈರ್ಮಲ್ಯವನ್ನು Personal Hygiene ಸದಾ ಕಾಪಾಡಿಕೊಂಡು ಆಹಾರ ಪದಾರ್ಥಗಳನ್ನು Handle ಮಾಡಬೇಕು. ಪ್ಲಾಸ್ಟಿಕ್ ಬ್ಯಾಸ್ಕೆಟ್‌ಗಳನ್ನು (Ventilated Basket) ಬಳಸಿ ತುಂಬಿಕೊಂಡು ಸ್ವಚ್ಛತೆಯಿಂದ ವಿತರಿಸಬೇಕು.

<u>8.3 ಶೇಂಗಾ ಚಿಕ್ಕಿ ವಿತರಿಸುವಲ್ಲಿ ಮುನ್ನೆಚ್ಚರಿಕೆಗಳು:</u>

ಸ್ವಚ್ಛತೆಯಿಂದ ತಯಾರಿಸಿರುವ ತಾಜಾ ಮತ್ತು ತಿನ್ನಲು ಯೋಗ್ಯವಾಗಿರುವ ಕನಿಷ್ಠ 35 ಗ್ರಾಂ ನಿಂದ 40 ಗ್ರಾಂ ತೂಕದ ಶೇಂಗಾ ಚಿಕ್ಕಿಯ ಒಂದು ಬಿಲ್ಲೆಯನ್ನು ಮಾತ್ರ ವಿದ್ಯಾರ್ಥಿಗಳಿಗೆ ವಿತರಿಸುವುದು. ಬೆಲ್ಲ, ಶೇಂಗಾ ಬೀಜ ಇದರೊಂದಿಗೆ ರುಚಿಗೆ ಮತ್ತು ವಾಸನೆಗೆ ಏಲಕ್ಕಿಯನ್ನು ಬೆರೆಸಿ ಸಿದ್ಧಪಡಿಸಿರುವ ಶೇಂಗಾ ಚಿಕ್ಕಿಯನ್ನು ಮಾರುಕಟ್ಟೆಯಿಂದಾಗಲಿ, ಫುಡ್ ಫ್ಯಾಕ್ಟರಿಯಿಂದಾಗಲಿ, ಅಂಗಡಿಯಿಂದಾಗಲಿ, ಯಾವುದೇ ಮನೆಯಲ್ಲಿ ಸೆಲ್ಫ್ ಹೆಲ್ಪ್ ಗ್ರೂಪ್ / ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವ ಮಾರಟಗಾರರಿಂದಾಗಲಿ ಖರೀದಿಸಿ ತರುವಾಗ ಇದರ ಉತ್ತಮ ಗುಣಮಟ್ಟ, ರುಚಿ, ಬಣ್ಣ, ವಾಸನೆ, ತಾಜಾತನ, ತೂಕ ಪ್ರಮಾಣ, ಉತ್ಪನ್ನದ ದಿನಾಂಕ, ವಾಯಿದೆ ಮುಗಿಯುವ ದಿನಾಂಕ ಮತ್ತು ಸಿದ್ಧಪಡಿಸುವಾಗ ಬಳಸಿರುವ ಪದಾರ್ಥಗಳ ಬಗ್ಗೆ, ಉತ್ಪನ್ನ ಮಾಡುವ ಅಡುಗೆ ಕೇಂದ್ರದ / ಫ್ಯಾಕ್ಟರಿ ಸ್ಥಳದಲ್ಲಿ ನಿರ್ವಹಿಸಿರುವ ಸ್ವಚ್ಛತೆ, ನೈರ್ಮಲ್ಯ ಮತ್ತು ಸುರಕ್ಷಿತ ವಾತಾವರಣದ ಬಗ್ಗೆ ಅಡುಗೆ ಸಿಬ್ಬಂದಿ/ ಕೆಲಸಗಾರರ ಆರೋಗ್ಯ , ಸ್ವಚ್ಛತೆ, ನೈರ್ಮಲ್ಯ ಇತ್ಯಾದಿ ಗಮನಿಸಿ ಖಾತರಿಪಡಿಸಿಕೊಂಡು ಖರೀದಿ ಮಾಡಿ ಸರಬರಾಜು ಪಡೆಯಬೇಕು. ಶಾಲೆಯ ಅಡುಗೆ ಕೇಂದ್ರದಲ್ಲಿಯೇ / ಇತರೆ ಯಾವುದೇ ಅಡುಗೆ ಕೇಂದ್ರದಲ್ಲಿ ತಯಾರಾದ, ಉತ್ತಮ ಪದಾರ್ಥಗಳನ್ನು ಬಳಸಿ ತಾಜಾತನದಿಂದ ಕೂಡಿದ ಶೇಂಗಾ ಚಿಕ್ಕಿಯನ್ನು ವಾರಕ್ಕೊಮ್ಮೆ ಸಿದ್ಧಪಡಿಸಿ ವಿತರಿಸುವುದು ಸೂಕ್ತವಾಗಿರುತ್ತದೆ. ತಂಪಾದ ಮತ್ತು ಒಣ ಪ್ರದೇಶದಲ್ಲಿ ಸ್ಟೀಲ್ ಕಂಟೈನರ್‌ಗಳಲ್ಲಿ, Food grade Airtight Steel Containers ಗಳಲ್ಲಿ ಧೂಳ ರಹಿತವಾಗಿ, Moisture, ಬೂಸ್ಟ್/ಮುಗ್ಗಲು ರಹಿತವಾಗಿ, ಸೂರ್ಯನ ಬೆಳಕು ಬೀಳದಂತೆ, ಎಫ್.ಎಸ್.ಎಸ್.ಐ. ಮಾನದಂಡಗಳಿಗೆ ಅನುಗುಣವಾಗಿ ಆಹಾರ ಸಂರಕ್ಷಣೆ ಕಾಯಿದೆ ನಿಯಮದಡಿ

ಸಂರಕ್ಷಿಸಡುವ ಕ್ರಮವಹಿಸುವುದು. ಪ್ರತಿ ದಿನ ಇಲ್ಲವೇ ಎರಡು ದಿನಗಳಿಗೆ ಒಮ್ಮೆ ಕಂಟೈನರ್ ತೆಗೆದು ಗುಣಮಟ್ಟ ಪರೀಕ್ಷಿಸಿ ಖಾತರಿ ಪಡಿಸಿಕೊಂಡು ನಿರ್ವಹಿಸುವುದು. ವಿತರಣೆಯಲ್ಲಿ First in, First out ಪದ್ಧತಿಯನ್ನು ಅನುಸರಿಸಬೇಕು.

9. ಸುರಕ್ಷತೆ, ಸ್ವಚ್ಛತೆ, ನೈರ್ಮಲ್ಯ ಹಾಗೂ ಆರೋಗ್ಯಕರ ವಾತಾವರಣ ನಿರ್ಮಾಣ ಮತ್ತು ನಿರ್ವಹಣೆಯ ಕ್ರಮಗಳು:

9.1ಕೇಂದ್ರ ಸರ್ಕಾರವು ಈ ಹಿಂದೆ ಎಂ.ಹೆಚ್.ಆರ್.ಡಿ. ಮಂತ್ರಾಲಯದ ಮಧ್ಯಾಹ್ನದ ಉಪಾಹಾರ ಯೋಜನೆಯ ವಿಭಾಗದಿಂದ ರಾಜ್ಯಕ್ಕೆ ಆದೇಶಿಸಿ ನೀಡಿರುವ "The Guidelines on Food Safety and Hygiene for School level Kitchens under Mid-Day Meals Scheme, Dated: 13.02.2015 ಇದರಂತೆ ಎಲ್ಲಾ ಆಹಾರ ಸ್ವಚ್ಛತೆ, ಸುರಕ್ಷತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ರೂಪಿಸಿರುವ ಎಸ್.ಓ.ಪಿ. ನಿಯಮಗಳ ಮಾರ್ಗಸೂಚಿ (ಪ್ಯಾರಾ 1.9 ರಿಂದ ಪ್ಯಾರಾ 1.12 ರವರೆಗೆ)ಯನ್ನು ತಪ್ಪದೇ ಓದಿಕೊಂಡು ಕಡ್ಡಾಯವಾಗಿ ಅನುಪಾಲನೆ ಮಾಡುವುದು.

9.2Equipment and Surfaces: ಸದರಿ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ Cleaning Protocols for all Utensils, Equipment and Surfaces used in the Egg preparation process ಅನ್ನು ತಪ್ಪದೇ ಅನುಪಾಲನೆ ಮಾಡುವುದು.

9.3Chemical Use for Cleaning: ಪೂರಕ ಪೌಷ್ಠಿಕ ಆಹಾರ ಸಿದ್ಧಪಡಿಸಲು, ವಿತರಿಸಲು ಬಳಸಿದ ಪಾತ್ರೆ ಪರಿಕರಗಳ ಸ್ವಚ್ಛತೆಯನ್ನು ಪ್ರತಿ ದಿನ ಉತ್ತಮ ಮತ್ತು ಯೋಗ್ಯ ಗುಣಮಟ್ಟದ ಸೋಪ್ ಆಯಿಲ್, ಫುಡ್ ಸೇಫ್ ಕ್ಲೀನಿಂಗ್ ಏಜೆಂಟ್ಸ್‌ಗಳನ್ನು ಮತ್ತು ಸಾಬೂನುಗಳನ್ನು ಬಳಸಿ ನಿರ್ವಹಿಸುವುದು. ನಂತರ ಬಿಸಿನೀರಿನಲ್ಲಿ ತೊಳೆದು ಒಣಗಿಸಿ ಜೋಡಿಸಿಡುವ ಕ್ರಮವನ್ನು ಅನುಸರಿಸುವುದು.

9.4Hygiene Measure: ಅಡುಗೆ ಸಿಬ್ಬಂದಿಗಳು ಸದಾ ತಮ್ಮ ವೈಯುಕ್ತಿಕ ಸ್ವಚ್ಛತೆ, ನೈರ್ಮಲ್ಯ ಕಾಪಾಡಿಕೊಂಡು, ಕೈಗಳಿಗೆ ಕೈಗವಸುಗಳನ್ನು (Clean Hand Gloves), ಏಪ್ರಾನ್ (Apron) ಧರಿಸಿಕೊಂಡು, ತಲೆಗೆ ಟೋಪಿ (Head Cap) ಹಾಕಿಕೊಂಡೇ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ಪದಾರ್ಥಗಳನ್ನು ವಿದ್ಯಾರ್ಥಿಗಳಿಗೆ ಸ್ವಚ್ಛತೆಯಿಂದ ವಿತರಿಸುವುದು.

9.5ಅಡುಗೆ ಸಿಬ್ಬಂದಿಗಳು ಆಹಾರವನ್ನು ವಿತರಿಸುವ ಪೂರ್ವದಲ್ಲಿ ಬಿಸಿಯೂಟ ಸ್ವೀಕರಿಸಲು ಕುಳಿತುಕೊಳ್ಳುವ ಸ್ಥಳವನ್ನು (Dining Area) ಧೂಳುರಹಿತವಾಗಿ ಸರಿಯಾಗಿ ಸ್ವಚ್ಛ ಗೊಳಿಸಿ ಉತ್ತಮ ನೈರ್ಮಲ್ಯ ವಾತಾವರಣ ನಿರ್ಮಾಣ ಮಾಡಿದ ನಂತರವೇ ಶಾಲಾ ವಿದ್ಯಾರ್ಥಿಗಳನ್ನು ಸಾಲಾಗಿ ಕುಳ್ಳಿರಿಸಿ ಪೂರಕ ಪೌಷ್ಠಿಕ ಆಹಾರವನ್ನು ವಿತರಿಸುವುದು.

10. ಸಿಬ್ಬಂದಿಗಳಿಗೆ ಅಗತ್ಯ ತರಬೇತಿ, ವೃತ್ತಿ ಸಾಮರ್ಥ್ಯ ಅಭಿವೃದ್ಧಿಗೊಳಿಸುವುದು:

10.1 ತರಬೇತಿ (Training):

ಪೂರಕ ಪೌಷ್ಠಿಕ ಆಹಾರ ಮತ್ತು ಬಿಸಿಯೂಟ ಸಿದ್ಧಪಡಿಸಿ ವಿತರಿಸುವ ಅಡುಗೆ ಸಹಾಯಕರಿಗೆ, ಮುಖ್ಯ ಅಡುಗೆಯವರಿಗೆ, ಆಹಾರ ಪದಾರ್ಥಗಳ ಖರೀದಿಯಲ್ಲಿ ಪಾಲ್ಗೊಳ್ಳುವ ಖರೀದಿ ಸಮಿತಿ ಸದಸ್ಯರಿಗೆ, ಶಾಲಾ ಹಂತದಲ್ಲಿ ಮೇಲ್ವಿಚಾರಕರಾಗಿರುವ ಮುಖ್ಯಶಿಕ್ಷಕರಿಗೆ, ಸಹಾಯಕ ಶಿಕ್ಷಕರಿಗೆ, ನೋಡಲ್ ಶಿಕ್ಷಕರಿಗೆ, ಎಸ್.ಡಿ.ಎಂ.ಸಿ. ಸದಸ್ಯರಿಗೆ ತಾಯಂದಿರ ಸಮಿತಿಯ ಸದಸ್ಯರಿಗೆ, ಸಿ.ಆರ್.ಪಿ.ಗಳಿಗೆ ಆಹಾರ ಖರೀದಿ ನಿಯಮಗಳು, ಆಹಾರ ಗುಣಮಟ್ಟ ಪರೀಕ್ಷೆ, ಆಹಾರ ಸಂರಕ್ಷಣೆ, ಸುರಕ್ಷಿತ ದಾಸ್ತಾನು, ಶುಚಿ-ರುಚಿ ಪರೀಕ್ಷೆ, ನಿರ್ವಹಣೆ ಬಗ್ಗೆ ಇಲಾಖೆಯಿಂದ ನೀಡಲಾಗಿರುವ ಎಸ್.ಓ.ಪಿ. ಮಾರ್ಗಸೂಚಿ ಕುರಿತಂತೆ, ಬೆಂಕಿ ಸುರಕ್ಷತೆ, ಗ್ಯಾಸ್ ಸುರಕ್ಷತೆ, ಕುಕ್ಕರ್ ಬಳಕೆಯ ಸುರಕ್ಷತೆ ಕುರಿತಂತೆ ಅರಿವು-ಜಾಗೃತಿ ಮೂಡಿಸಲು, ಸುರಕ್ಷತಾ ಕ್ರಮಗಳ ಬಗ್ಗೆ ಇಲಾಖೆಯಿಂದ ಹಾಗೂ APF ಸಂಸ್ಥೆಯಿಂದ ಜಂಟಿಯಾಗಿ ತರಬೇತಿಗಳನ್ನು, ಮಾರ್ಗದರ್ಶಿ ಸಭೆಗಳನ್ನು, ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಹಮ್ಮಿಕೊಳ್ಳುವುದು.

10.2 ಮೇಲ್ವಿಚಾರಣೆ (Supervision):

ಶಾಲೆ, ಕ್ಲಸ್ಟರ್, ತಾಲ್ಲೂಕು/ಬ್ಲಾಕ್, ಜಿಲ್ಲಾ ಹಂತದಲ್ಲಿ ಹಾಗೂ ರಾಜ್ಯ ಹಂತದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಹಂತದ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಇಲಾಖೆಯಿಂದ ಅನುಷ್ಠಾನಗೊಳಿಸಿರುವ ಎಸ್.ಓ.ಪಿ.ಯ ಅನುಪಾಲನೆಯ ಬಗ್ಗೆ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸುವ ಬಗ್ಗೆ, ಶಾಲಾ ಹಂತದ ತಪಾಸಣೆ ಮಾಡುವ ಬಗ್ಗೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶಿ ಸಭೆಗಳನ್ನು APF ಸಂಸ್ಥೆಯವತಿಯಿಂದ ಹಾಗೂ ಇಲಾಖಾವತಿಯಿಂದ ಜಂಟಿಯಾಗಿ ಹಮ್ಮಿಕೊಳ್ಳುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01

ಅನುಬಂಧ-2

SNF -ಪರಿವರ್ತನಾ ವೆಚ್ಚದ ವಿವರ

Method using Conversion Cost / Unit Cost and Available Ensured Calories, Nutrients and Micronutrients in SNF:

ಕ್ರಮ ಸಂಖ್ಯೆ	ಖರ್ಚು – ವೆಚ್ಚಗಳು	ವೆಚ್ಚಕ್ಕೆ ನಿಗದಿಪಡಿಸಿದ ಮೊತ್ತ ರೂ.	ಪೂರಕ ಪೌಷ್ಠಿಕ ಆಹಾರದ ವಿತರಣೆಯ ತೂಕ, ಕ್ಯಾಲರಿ ಪೋಷಕಾಂಶಗಳ ಲಭ್ಯತೆ
(1)	ಮೊಟ್ಟೆ (For Egg Eaters: Eggs - Weekly 6)		
1	ಮೊಟ್ಟೆ (ಪ್ರಮಾಣ -1/ ಪ್ರತಿ ದಿನಕ್ಕೆ) ಖರೀದಿಗೆ	ರೂ. 5.00	ಕನಿಷ್ಠ ತೂಕ : 50 grams Energy 77K Cal Protein (6.3gms) Carbohydrates (0.4gms) Potassium (69gms) Sodium (71mgs) Fat (4.8gms) Vitamin A (5.4%) Calcium (2.2%) Iron (4.9%)
2	ಮೊಟ್ಟೆ ಬೇಯಿಸಲು ಇಂಧನ ವೆಚ್ಚ	ರೂ. 0.50	
3	ಮೊಟ್ಟೆ ಬೇಯಿಸಿ ಸಿಪ್ಪೆ ಸುಲಿಯುವ ಕೂಲಿ ವೆಚ್ಚ (ಅಡುಗೆ ಸಿಬ್ಬಂದಿಗೆ)	ರೂ.0.30	
4	ಸಾಗಾಣಿಕಾ ವೆಚ್ಚ	ರೂ.0.20	
	ಒಟ್ಟು ಘಟಕ ವೆಚ್ಚ	**ರೂ. 6.00**	
(2)	ಬಾಳೆಹಣ್ಣು (For Non-Egg Eaters : Banana Ripened Fruits - Weekly 12)		
1	ಬಾಳೆಹಣ್ಣು (ಪ್ರಮಾಣ -2/ಪ್ರತಿ ದಿನಕ್ಕೆ) ಖರೀದಿಗೆ	ರೂ. 5.80	Energy (77.45-135K Cal) Carbohydrates (17.46-25gms) Fiber (13.9gms) Vitamin C (21.15mg) Vitamin B6(25%) Riboflavin (Vitamin B2) (5%) Manganese (14.50mg) Fat (0.87gms) Phosphorous and Pottasium (253.4mg)
2	ಸಾಗಾಣಿಕಾ ವೆಚ್ಚ	ರೂ.0.20	
	ಒಟ್ಟು ಘಟಕ ವೆಚ್ಚ	**ರೂ. 6.00**	
	ಶೇಂಗಾ ಚಿಕ್ಕಿ (For Non-Egg Eaters : Alternative to Banana - Weekly 6 Bars)		
1	ಶೇಂಗಾ ಚಿಕ್ಕಿ (ಪ್ರಮಾಣ -35 ರಿಂದ 40 ಗ್ರಾಂ ಶೇಂಗಾ ಬೀಜ + ಬೆಲ್ಲ + ಏಲಕ್ಕಿ - 1 ಬಿಲ್ಲೆ / ಪ್ರತಿ ದಿನಕ್ಕೆ) ಖರೀದಿಗೆ	ರೂ.5.50	ಕನಿಷ್ಠ ತೂಕ : 35-40 gram Energy (102 K Cal) Carbohydrates (10.3gms) Fiber (1 gm) Fat (5.9gms) Vitamin B1(0.1mg) Vitamin B3(1.5mg) Calcium (18.1mg) Iron (0.8mg) Magnesium (20.2 mg) Phosphorus (48.6mg) Sodium (2.2mg) Potassium (84.6mg) Zinc (0.4mg)
2	ಇಂಧನ ವೆಚ್ಚ	ರೂ.0.30	
3	ಸಾಗಾಣಿಕಾ ವೆಚ್ಚ	ರೂ.0.20	
	ಒಟ್ಟು ಘಟಕ ವೆಚ್ಚ	**ರೂ. 6.00**	

೨೦.೧೦.೨೦೨೨

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01

ಅನುಬಂಧ – 3

SNF - ಅನುಷ್ಠಾನ ವೇಳಾಪಟ್ಟಿ

Plan of Action for Distribution of Supplementary Nutrition Food (SNF) for all the Six days in a Week during Three Years as per MoU with APF :

ಕ್ರ ಸಂ	ಮಾಹೆ / ತಿಂಗಳು	ತಿಂಗಳಲ್ಲಿ ಲಭ್ಯವಾಗುವ ವಾರಗಳು	ನಿಗಧಿ ಪಡಿಸಿರುವ ವಾರಗಳು	ರಾಜ್ಯ ಸರ್ಕಾರದ ಅನುದಾನದಿಂದ ನಿಗಧಿಪಡಿಸಿರುವ ದಿನಗಳು (ವಾರಕ್ಕೆ -02 ದಿನಗಳಂತೆ)	ಅಜೀಂ ಪ್ರೇಮ್ ಜಿ ಸಂಸ್ಥೆಯಿಂದ ನಿಗಧಿಪಡಿಸಿರುವ ದಿನಗಳು(ವಾರಕ್ಕೆ -04ದಿನಗಳಂತೆ)	ಪ್ರತಿ ವಿದ್ಯಾರ್ಥಿಗೆ ತಿಂಗಳಿನಲ್ಲಿ ಒಟ್ಟು ವಿತರಣೆ
1 ನೇ ತ್ರೈಮಾಸಿಕ ಅವಧಿಯ ವಿತರಣೆ :						
1	16.09.2024	04	02	04	08	12
2	ಅಕ್ಟೋಬರ್ 2024	02	02	04	08	12
3	ನವೆಂಬರ್ 2024	04	04	08	16	24
4	ಡಿಸೆಂಬರ್ 2024	04	04	08	16	24
2 ನೇ ತ್ರೈಮಾಸಿಕ ಅವಧಿಯ ವಿತರಣೆ:						
5	ಜನವರಿ 2025	04	04	08	16	24
6	ಫೆಬ್ರುವರಿ 2025	04	04	08	16	24
7	ಮಾರ್ಚ 2025	04	04	08	16	24
1 ನೇ ತ್ರೈಮಾಸಿಕ ಅವಧಿಯ ವಿತರಣೆ:						
8	ಏಪ್ರಿಲ್ 2025	02	02	04	08	12
9	ಮೇ 2025	-	-	-	-	-
10	ಜೂನ್ 2025	04	04	08	16	24
2 ನೇ ತ್ರೈಮಾಸಿಕ ಅವಧಿಯ ವಿತರಣೆ:						
11	ಜುಲೈ 2025	04	04	08	16	24
12	ಆಗಸ್ಟ 2025	04	04	08	16	24
13	ಸೆಪ್ಟೆಂಬರ್ 2025	04	04	08	16	24
3 ನೇ ತ್ರೈಮಾಸಿಕ ಅವಧಿಯ ವಿತರಣೆ:						
14	ಅಕ್ಟೋಬರ್ 2025	02	02	04	08	12
15	ನವೆಂಬರ್ 2025	04	04	08	16	24
16	ಡಿಸೆಂಬರ್ 2025	04	04	08	16	24
4 ನೇ ತ್ರೈಮಾಸಿಕ ಅವಧಿಯ ವಿತರಣೆ:						
17	ಜನವರಿ 2026	04	04	08	16	24
18	ಫೆಬ್ರುವರಿ 2026	04	04	08	16	24

19	ಮಾರ್ಚ್ 2026	04	04	08	16	24
1 ನೇ ತ್ರೈಮಾಸಿಕ ಅವಧಿಯ ವಿತರಣೆ:						
20	ಏಪ್ರಿಲ್ 2026	02	02	04	08	12
21	ಮೇ 2026	-	-	-	-	-
22	ಜೂನ್ 2026	04	04	08	16	24
2 ನೇ ತ್ರೈಮಾಸಿಕ ಅವಧಿಯ ವಿತರಣೆ:						
23	ಜುಲೈ 2026	04	04	08	16	24
24	ಆಗಸ್ಟ 2026	04	04	08	16	24
25	ಸೆಪ್ಟೆಂಬರ್ 2026	04	04	08	16	24
3 ನೇ ತ್ರೈಮಾಸಿಕ ಅವಧಿಯ ವಿತರಣೆ:						
26	ಅಕ್ಟೋಬರ್ 2026	02	02	04	08	12
27	ನವೆಂಬರ್ 2026	04	04	08	16	24
28	ಡಿಸೆಂಬರ್ 2026	04	04	08	16	24
4 ನೇ ತ್ರೈಮಾಸಿಕ ಅವಧಿಯ ವಿತರಣೆ:						
29	ಜನವರಿ 2027	04	04	08	16	24
30	ಫೆಬ್ರುವರಿ 2027	04	04	08	16	24
31	ಮಾರ್ಚ್ 2027	04	04	08	16	24
1 ನೇ ತ್ರೈಮಾಸಿಕ ಅವಧಿಯ ವಿತರಣೆ						
32	ಏಪ್ರಿಲ್ 2027	02	02	04	08	12
33	ಮೇ 2027	-	-	-	-	-
34	ಜೂನ್ 2027	04	04	08	16	24
2 ನೇ ತ್ರೈಮಾಸಿಕ ಅವಧಿಯ ವಿತರಣೆ:						
35	ಜುಲೈ 2027	04	04	08	16	24
36	ಆಗಸ್ಟ 2027	04	04	08	16	24
37	15.09.2027	04	04	08	16	24

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01